ವಿಜಯಪುರ | ಸಂಪುಟ 01 | ಸಂಚಿಕೆ 269 | ಪುಟ 4 | ₹ 3.00
https://udayarashminews.com
udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಬುಧವಾರ ಡಿಸೆಂಬರ್ 20, 2023

“ಸರ್ವ ಸಮುದಾಯಗಳಿಗೆ ಬೆಳಕು ನೀಡುವುದೇ ಧರ್ಮ. ನುಡಿದಂತೆ ನಡೆಯುವುದೇ ಧರ್ಮ. ನುಡಿಯುವುದೊಂದು, ನಡೆಯುವುದಿನ್ನೊಂದಾದಾಗ ಸಮಾಜದ ಎಲ್ಲ ರಂಗಗಳಲ್ಲಿ ಅವ್ಯವಸ್ಥೆ, ಅರಾಜಕತೆ, ಅತೃಪ್ತಿಯ ಮನೋಭಾವ ಕಂಡು ಬರುತ್ತದೆ.

– ಡಾ.ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶ್ರೀ
ರಂಭಾಪುರಿ ಪೀಠದ ಜಗದ್ಗುರು



ನವದೆಹಲಿಯಲ್ಲಿ ನಡೆದ ಸಭೆ । ಖರ್ಗೆ ಹೆಸರು ಸೂಚಿಸಿದ ಮಮತಾ ಬ್ಯಾನರ್ಜಿ & ಕೇಜ್ರಿವಾಲ್

# ’I.N.D.I.A’ ಪ್ರಧಾನಿ ಅಭ್ಯರ್ಥಿಯಾಗಿ ಖರ್ಗೆ ಹೆಸರು!

ನವದೆಹಲಿ: ಲೋಕಸಭೆ ಚುನಾವಣೆ ಮುಗಿಯುವವರೆಗೆ ಇಂಡಿಯಾ ಬಣವು ತನ್ನ ಪ್ರಧಾನಿ ಅಭ್ಯರ್ಥಿಯಾರೆಂದು ಘೋಷಿಸುವುದಿಲ್ಲ ಎಂದು ಸೋಮವಾರ ಹೇಳಿದ್ದ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ವಾರದ ದಿನವೇ (ಮಂಗಳವಾರ) ತದ್ವಿರುದ್ಧ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರನ್ನು ಪ್ರಧಾನಿ ಅಭ್ಯರ್ಥಿಯಾಗಿ ಪ್ರಸ್ತಾಪಿದ್ದಾರೆ ಎನ್ನಲಾಗಿದ್ದು, ಕಾಂಗ್ರೆಸ್ ಅಧ್ಯಕ್ಷರು ಈ ಪ್ರಸ್ತಾಪವನ್ನು ನಯವಾಗಿ ನಿರಾಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇಂಡಿಯಾ ಕೂಟದ ಪ್ರಧಾನಿ ಅಭ್ಯರ್ಥಿಯ ಕುರಿತು ಸೋಮವಾರ ಮಾತನಾಡಿದ್ದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ‘2024ರ ಲೋಕಸಭೆ ಚುನಾವಣೆಯ ನಂತರ ವಿರೋಧ ಪಕ್ಷಗಳ ಮೈತ್ರಿ ಕೂಟ ‘ಇಂಡಿಯಾ’ದ ಪ್ರಧಾನಿ ಅಭ್ಯರ್ಥಿಯನ್ನು ನಿರ್ಧರಿಸಲಾಗುವುದು ಎಂದು ಹೇಳಿದ್ದರು.

ನಾಲ್ಕು ದಿನಗಳ ಭೇಟಿಗಾಗಿ ಮಮತಾ ಬ್ಯಾನರ್ಜಿ ದೆಹಲಿಯಲ್ಲಿದ್ದು, ವಿರೋಧ ಪಕ್ಷದ ಇಂಡಿಯಾ ಬಣದ ಸಭೆಯಲ್ಲಿ ಭಾಗವಹಿಸಿದ್ದಾರೆ.

ಸೀಟು ಹಂಚಿಕೆ ಮತ್ತು ಜಂಟಿ ಸಮಾವೇಶಗಳು ಇಂದಿನ ಇಂಡಿಯಾ ಸಭೆಯ ಅಜೆಂಡಾ ಆಗಿತ್ತು ಎನ್ನಲಾಗಿದೆ. ‘ಈ ವಿಷಯಗಳ ಕುರಿತು ಆದಷ್ಟು ಬೇಗ ಒಮ್ಮತದ ನಿರ್ಧಾರಕ್ಕೆ ಬರುವುದು ಇಂಡಿಯಾ ಬ್ಲಾಕ್‌ನ ಮುಂದಿರುವ ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ. ಪ್ರಧಾನಿ ಅಭ್ಯರ್ಥಿ ಯಾರಾಗಬೇಕು ಎಂಬುದನ್ನು ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದು’ ಎಂದು ಹೇಳಿದ್ದರು.

ಸತತ ಎರಡನೇ ದಿನ ಸಂಸತ್ತಿನ ಉಭಯ ಸದನಗಳಿಂದ ಸಂಸದರನ್ನು ಸಾಮೂಹಿಕವಾಗಿ ಅಮಾನತುಗೊಳಿಸಿದ ಹಿನ್ನೆಲೆಯಲ್ಲಿ, ಇಂಡಿಯಾ ಬ್ಲಾಕ್ ಪಕ್ಷಗಳ ನಾಯಕರು ಮಂಗಳವಾರ ನವದೆಹಲಿಯಲ್ಲಿ ಸಭೆ ನಡೆಸಿದವು. 2024ರ ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಕುರಿತು ತಂತ್ರಗಳು ಮತ್ತು ಪ್ರಧಾನಿ ಅಭ್ಯರ್ಥಿ ಸಂಭಾವ್ಯ ಹೆಸರುಗಳನ್ನು ಚರ್ಚಿಸಲಾಗಿದೆ ಎಂದು ತಿಳಿದುಬಂದಿದೆ.

ಸಭೆಯಲ್ಲಿ ಮಮತಾ ಬ್ಯಾನರ್ಜಿ ಮತ್ತು ಅರವಿಂದ್ ಕೇಜ್ರಿವಾಲ್ ಅವರು ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗುವಂತೆ ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರನ್ನು ಪ್ರಸ್ತಾಪಿಸಿದ್ದಾರೆ ಎಂದು ವರದಿಗಳು ಹೇಳಿವೆ.

ಸೌಜನ್ಯ: ನಾನುಗೌರಿ.ಕಾಂ



## ಸಂಸದರು ಗೆಲ್ಲುವುದು ಮುಖ್ಯ: ಖರ್ಗೆ



ಇಂಡಿಯಾ ಮೈತ್ರಿಕೂಟ ಸಭೆಯ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಇಂಡಿಯಾ ಪ್ರಧಾನಿ ಅಭ್ಯರ್ಥಿಯ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ನಮಗೆ ಮೊದಲು ಸಂಸದರು ಗೆಲ್ಲುವುದು ಮುಖ್ಯ. ಸಂಸದರು ಗೆದ್ದು ಬಂದ ಬಳಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಧಾನಿ ಅಭ್ಯರ್ಥಿಯನ್ನು ಹೇಗೆ ಆಯ್ಕೆ ಮಾಡಿಕೊಳ್ಳಬಹುದು ಎಂಬುದರ ಕುರಿತು ಚರ್ಚಿಸುತ್ತೇವೆ. ಮೊದಲು ಮೈತ್ರಿಕೂಟದ ಸಂಸದರು ಗೆದ್ದು ಬರಲಿ. ಆಮೇಲೆ ನೋಡೋಣ ಎಂದರು.

ಸಭೆಯಲ್ಲಿ ಪ್ರತಿಪಕ್ಷಗಳ ಸಂಸದರ ಅಮಾನತನ್ನು ತೀವ್ರವಾಗಿ ಖಂಡಿಸಲಾಯಿತು ಮತ್ತು ಅಮಾನತು ಖಂಡಿಸಿ ಡಿಸೆಂಬರ್ 22 ರಂದು ದೇಶಾದ್ಯಂತ ಪ್ರತಿಭಟನೆ ನಡೆಸಲು ನಿರ್ಧರಿಸಿರುವುದಾಗಿ ಖರ್ಗೆ ತಿಳಿಸಿದರು.

## ಮಾನವ ಕಲ್ಯಾಣವೇ ಎಲ್ಲ ಧರ್ಮಗಳ ತಿರುಳು :ರಂಭಾಪುರಿ ಶ್ರೀ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಧರ್ಮಗಳು, ಆಚರಣೆಗಳು ಬೇರೆ ಬೇರೆ ಆಗಿರಬಹುದು ಆದರೆ ಎಲ್ಲ ಧರ್ಮಗಳ ತಿರುಳು ಮಾನವ ಕಲ್ಯಾಣವಾಗಿದೆ ಎಂದು ರಂಭಾಪುರಿ ಪೀಠದ ಜಗದ್ಗುರು ಡಾ.ಪ್ರಸನ್ನ್ ರೇಣುಕ ವೀರಸೋಮೇಶ್ವರ ರಾಜ ದೇಶಿಕೇಂದ್ರ ಶಿವಾಚಾರ್ಯರು ಹೇಳಿದರು.

ಪಟ್ಟಣದ ವೀರಭದ್ರೇಶ್ವರರ 11ನೇ ವರ್ಷದ ಕಾರ್ತಿಕ ದೀಪೋತ್ಸವದ ಅಂಗವಾಗಿ ಸೋಮವಾರ ಜರುಗಿದ ಧರ್ಮಸಭೆಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಸರ್ವಕಾಲದಲ್ಲಿ, ಸರ್ವ ಸಮುದಾಯಗಳಿಗೆ ಬೆಳಕು ನೀಡುವುದು ಯಾವುದಾದರೂ ಇದ್ದರೆ ಅದುವೇ ಧರ್ಮ. ನಾವು ನುಡಿದಂತೆ ನಡೆಯುವುದೇ ಧರ್ಮ. ನುಡಿಯುವುದು ಒಂದು, ನಡೆಯುವುದು ಇನ್ನೊಂದು ಆದಾಗ ಸಮಾಜದ ಎಲ್ಲ ರಂಗಗಳಲ್ಲಿ ಅವ್ಯವಸ್ಥೆ, ಅರಾಜಕತೆ, ಅತೃಪ್ತಿಯ ಮನೋಭಾವ ಕಂಡು ಬರುತ್ತದೆ. ಧರ್ಮ ಎನ್ನುವುದು ಹಸಿದವನಿಗೆ ಅನ್ನ, ಬಾಯಾರಿದವನಿಗೆ ನೀರು, ಪಕ್ಷಿಗೆ ರೆಕ್ಕೆ, ಕುರುಡನಿಗೆ ಕಣ್ಣು ಇದ್ದ ಹಾಗೇ, ಅಂತೆಯೇ ಭೂಮಿತಾಯಿ, ಗಾಳಿ, ನೀರುಗಳಿಗೆ ಒಂದು ಧರ್ಮ ಹಾಗೂ ಜವಾಬ್ದಾರಿಯಿದೆ. ಒಂದು ವೇಳೆ ಜವಾಬ್ದಾರಿ ಮರೆತು ಭೂಮಿ ಮೈಗೊಡವಿದರೆ, ಗಾಳಿ ಬಿರುಗಾಳಿಯಾದರೆ, ನೀರು ಪ್ರವಾಹವಾದರೆ ನಮ್ಮ ಸ್ಥಿತಿ ಏನಾಗಬಹುದು? ಆದ್ದರಿಂದ ನಮ್ಮ ಧರ್ಮ, ಜವಾಬ್ದಾರಿ ಅರಿತು ನಡೆಯಬೇಕು ಎಂದು ಹೇಳುತ್ತಾ, ಪ್ರತಿಯೊಬ್ಬರಿಗೆ ಶಾಸ್ತ್ರದ ಅರಿವಿರಬೇಕು. ಇಲ್ಲವೇ ಶಸ್ತ್ರದ ಭಯವಿರಬೇಕು. ಬಸವಣ್ಣ, ಮಹಾತ್ಮಾಗಾಂಧಿ, ಶರಣ ಬಸವೇಶ್ವರ, ಕಡಕೋಳ ಮಡಿವಾಳಪ್ಪ ಅವರ ಜೀವನದಲ್ಲಿ ಗುರು ಯಾವ ರೀತಿಯಾದ ಪರಿಣಾಮ ಉಂಟು ಮಾಡಿದ್ದರು ಎನ್ನುವುದನ್ನು ವಿವರಿಸಿದರು.

ಶ್ರಮ, ದುಡಿಮೆ, ಕೃಷಿ, ಆರೋಗ್ಯದ ನಡುವಿನ ಪರಸ್ಪರ ಸಂಬಂಧದ ಕುರಿತು ದೀರ್ಘವಾಗಿ ಮಾತನಾಡಿ, ಜಗತ್ತಿನ ಸಂಪತ್ತು ವಿಕಾಸಕ್ಕಾಗಿ ಇದೆ ವಿನಹ ವಿನಾಶಕ್ಕಾಗಿ ಅಲ್ಲ ಎಂದರು.

ಶಾಸಕ ರಾಜುಗೌಡ ಪಾಟೀಲ(ಕುದರಿ ಸಾಲವಾಡಗಿ) ಧರ್ಮಸಭೆ ಉದ್ಘಾಟಿಸಿ ಮಾತನಾಡುತ್ತಾ, ಗುರುವಿನ ಆಶೀರ್ವಾದಿಂದ ನಾವು ಏನನ್ನಾದರೂ ಪಡೆಯಬಹುದು ಎನ್ನುವುದಕ್ಕೆ ನಾನೇ ಉತ್ತಮ ಉದಾಹರಣೆ ಎಂದರು.

ವಿಜಯಪುರ ಅನುಗ್ರಹ ಆಸ್ಪತ್ರೆಯ ನೇತ್ರತಜ್ಞ ಪ್ರಭುಗೌಡ ಬಿ.ಎಲ್. ಮಾತನಾಡಿ, ಎಲ್ಲ ಸಂಪತ್ತುಗಳಿಗಿಂತ ಮಿಗಿಲಾದದು ಆರೋಗ್ಯ ಸಂಪತ್ತು. ಆದ್ದರಿಂದ ಪ್ರತಿಯೊಬ್ಬರು ತಮ್ಮ ಆರೋಗ್ಯದ ಕುರಿತು ಕಾಳಜಿ ವಹಿಸುವಂತೆ ಸಲಹೆ ನೀಡಿದರು.

ಎಮ್ಮಿಗನೂರ ಹಂಪಿ ಸಾವಿರದೇವರ ಮಠದ ವಾಮದೇವ ಮಹಾಂತಶ್ರೀ, ಸದಯ್ಯನಮಠದ ವೀರಗಂಗಾಧರಶ್ರೀ, ಬಸವನಬಾಗೇವಾಡಿಯ ಶಿವಪ್ರಕಾಶಶ್ರೀ, ಜಡೇಮಠದ ಜಡೆಸಿದ್ದೇಶ್ವರಶ್ರೀ, ಪರದೇಶಿಮಠಶ್ರೀಗಳು ಆಶೀರ್ವಚನ ನೀಡಿದರು.

ಕಾರ್ತಿಕೋತ್ಸವ ಸೇವಾ ಸಮೀತಿಯ ಅಧ್ಯಕ್ಷ ಸಿ.ಕೆ.ಕುದರಿ ಪ್ರಸ್ತಾವಿಕವಾಗಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಸೇವಾ ಸಮೀತಿಯ ಸದಸ್ಯರು ಹಾಗೂ ದಾನಿಗಳನ್ನು ಸನ್ಮಾನಿಸಲಾಯಿತು. ನಂತರ ಮಹಾಪ್ರಸಾದ ಜರುಗಿತು.


ಸಗರದ ಮರುಳ ಮಹಾಂತಶ್ರೀಗಳು, ಕೊಕಟನೂರಿನ ಮಡಿವಾಳೇಶ್ವರ ಸ್ವಾಮೀಜಿ, ಚಿಮ್ಮಲಗಿಯ ಸಿದ್ಧರೇಣುಕ ಶ್ರೀಗಳು, ವ್ಹಿಡಿಸಿಸಿ ಬ್ಯಾಂಕ್ ನಿರ್ದೇಶಕ ಹಣಮಂತ್ರಾಯಗೌಡ ಪಾಟೀಲ(ಪಡಗಾನೂರ) ಶಂಕರಗೌಡ ಕೋಟಿಖಾನಿ, ಮಲ್ಲಿಕಾರ್ಜುನ ಗವಾಯಿ, ತಬಲಾ ವಾದಕ ಭೀಮಣ್ಣ ಸಣ್ಣೂರ, ಬಾಳಾಸಾಹೇಬಗೌಡ ಪಾಟೀಲ, ಬಾಳಯ್ಯ ಇಂಡಿಮಠ, ಸಿದ್ದು ಆನಂದಿ, ವಿನೋದ ನಾಶೀಮಠ, ಪಿ.ಜಿ.ಹಿರೇಮಠ, ಬಸಯ್ಯ ಮಲ್ಲಿಕಾರ್ಜುನಮಠ, ಉಮಾಕಾಂತ ಸೊನ್ನದ, ಬಾಬುಗೌಡ ಪಾಟೀಲ ಸೇರಿದಂತೆ ಸದ್ಭಕ್ತರು ಭಾಗವಹಿಸಿದ್ದರು.




### ರಾಜ ನುಡಿ

ಬಾಂಧವ್ಯವೆಂಬುದು ಸುಂದರವಾದ ಅನುಭೂತಿ. ಇಂತಹ ಬಾಂಧವ್ಯದಲ್ಲಿ ನೈಜತೆ (reality) ಸತ್ತರೆ ಔಪಚಾರಿಕತೆ (formality) ಪ್ರಾರಂಭವಾಗುತ್ತದೆ. ಬಾಂಧವ್ಯದ ಜೀವಂತಿಕೆಗೆ ನೈಜವಾಗಿರಿ.

–ಡಾ. ರಾಜಶೇಖರ ನಾಗೂರ



### ವಚನ ಚಿಂತನ 259

ಇಷ್ಟಲಿಂಗವೇ ಪ್ರಾಣಲಿಂಗ

*ಇಷ್ಟಲಿಂಗವೇ ಪ್ರಾಣ,ಪ್ರಾಣಲಿಂಗವೇ ಇಷ್ಟ ದೃಷ್ಟಿ ಬಲಿಯಲು ಉಭಯ ಒಂದಾದುದು ನಿಷ್ಕಲದ ಹೊನಲಯ್ಯ ಯೋಗಿನಾಥ*

*– ಸಿದ್ಧರಾಮೇಶ್ವರರು*

ಸಿದ್ಧರಾಮೇಶ್ವರರು ಇಷ್ಟಲಿಂಗದ ಪೂಜಾಫಲವನ್ನು ಇಲ್ಲಿ ವಿವರಿಸಿದ್ದಾರೆ. ಇಷ್ಟಲಿಂಗ ಪೂಜೆಯಲ್ಲಿ ನಿರತನಾದ ಶರಣನ ಕಂಗಳ ನೋಟವು ಲಿಂಗದೊಂದಿಗೆ ವಿಲೀನವಾದಾಗ (ಉಭಯ ಒಂದಾದಾಗ) ಸಾಧಕನಿಗೆ ಸಕಲ ಸಂಧಾನದ ನಿಷ್ಕಲದ ಹೊನಲಯ್ಯ ಎಂದಿದ್ದಾರೆ. ಅಂದರೆ ಒಬ್ಬ ವ್ಯಕ್ತಿಯ ಜೀವನದ ಅಂತಿಮ ಗುರಿಯ ಸಾಧನೆಯು ಇಷ್ಟಲಿಂಗ ಪೂಜೆಯಿಂದ ಲಭಿಸುತ್ತದೆ ಎಂದಿದ್ದಾರೆ. ಅದು ಬೆಳಗಿನ ರೂಪದಲ್ಲಿರುತ್ತದೆ. ಅದೊಂದು ವರ್ಣನಾತೀತವಾದ ಅನುಭಾವ. ಅಂತರಂಗದಲ್ಲಿಯ ಪ್ರಾಣಲಿಂಗದ ಅರಿವು ಇಷ್ಟಲಿಂಗದ ಮೂಲಕ ಜಾಗೃತವಾಗುತ್ತದೆ ಆಗ ಇಷ್ಟಲಿಂಗವೇ ಪ್ರಾಣಲಿಂಗವಾಗುವದರೊಂದಿಗೆ ಬೆರಗಿನ ಬೆಳಗು ಹೊರಹೊಮ್ಮುತ್ತದೆ. ಇದು ಪ್ರತಿಯೊಬ್ಬರ ಅನುಭವವಾಗಲಿ ಎಂಬುದು ಶರಣರ ಆಶಯವಾಗಿತ್ತು.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

ಅಪರಾಧ ತಡೆ ಮಾಸಾಚರಣೆಯಲ್ಲಿ ಪಿಎಸ್‌ಐ ಗಂಗೂಬಾಯಿ ಬಿರಾದಾರ ಕರೆ

## ಯುವಜನತೆ ಜಾಗೃತರಾಗಿ, ಅಪರಾಧ ತಡೆಯಲು ಮುಂದಾಗಿ

ಉದಯರಶ್ಮಿ ನ್ಯೂಸ್

ಕಲಕೇರಿ: ಆಧುನಿಕ ಜಗತ್ತಿನಲ್ಲಿ ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯಾದಂತೆಲ್ಲ ಬದಲಾದ ಸ್ವರೂಪದಲ್ಲಿ ಹಲವು ರೀತಿಯ ಅಪರಾಧ ಕೃತ್ಯಗಳು ನಡೆಯುತ್ತಿದ್ದು, ಇದನ್ನು ಯುವಜನತೆ ಅರಿತುಕೊಂಡು ಜಾಗೃತರಾಗಿ ಎಚ್ಚರಿಕೆಯಿಂದ ಜೀವನ ನಡೆಸುವುದರ ಜೊತೆಗೆ ಎಲ್ಲರೂ ಕಾನೂನು ಪಾಲನೆಯನ್ನು ಮೈಗೂಡಿಸಿಕೊಂಡು ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಮುಂದಾಗಬೇಕು ಎಂದು ಕಲಕೇರಿ ಪೋಲಿಸ್ ಠಾಣಾಧಿಕಾರಿ ಗಂಗೂಬಾಯಿ ಬಿರಾದಾರ ಹೇಳಿದರು.

ಗ್ರಾಮದ ಆದರ್ಶ ಶಿಕ್ಷಣ ಸಂಸ್ಥೆಯಲ್ಲಿ ವಿಜಯಪುರ ಜಿಲ್ಲಾ ಪೋಲಿಸ್ ಇಲಾಖೆಯ ಇಂಡಿ ಉಪವಿಭಾಗ ಕಲಕೇರಿ ಠಾಣೆಯ ವತಿಯಿಂದ ಹಮ್ಮಿಕೊಂಡ ಅಪರಾಧ ತಡೆ ಮಾಸಾಚರಣೆ ಡಿಸೆಂಬರ್ 2023 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಖದೀಮರು ತಂತ್ರಜ್ಞಾನ ಬಳಸಿ ಬ್ಯಾಂಕ್ ಮತ್ತು ಎಟಿಎಂ ಕಳ್ಳತನ, ಸೈಬರ್ ಕ್ರೈಮ್, ಫೋನ್ ಕಾಲ್ ಮೂಲಕ ದರೋಡೆ, ಫೇಸ್‌ಬುಕ್ ಫೇಕ್ ಐಡಿ ಮೂಲಕ ವಂಚನೆ ಸೇರಿದಂತೆ ಹಲವು ಕೃತ್ಯಗಳು ನಡೆಯುತ್ತಿದ್ದು, ಅಪರಿಚಿತರಿಗೆ ನಮ್ಮ ಓಟಿಪಿ ಮತ್ತಿತರೆ ವೈಯಕ್ತಿಕ ಮಾಹಿತಿಗಳನ್ನು ಹಂಚಿಕೊಳ್ಳಬಾರದು ಎಂದರು.

18 ವರ್ಷದೊಳಗಿನ ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳ ಕುರಿತು ವಿಚಾರಣೆ ನಡೆಸಲು ಮತ್ತು ಶೀಘ್ರಗತಿಯಲ್ಲಿ ತೀರ್ಪು ಮತ್ತು ಶಿಕ್ಷೆ ವಿಧಿಸಲು ಪೋಕ್ಸೋ ಕಾಯ್ದೆ 2012ರಲ್ಲಿ ಜಾರಿಗೆ ಬಂದಿದ್ದು ಇದರನ್ವಯ ಯಾವುದೇ ಬಾಲ್ಯ ವಿವಾಹ, ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳ ಕುರಿತು ಮಕ್ಕಳ ಸಹಾಯವಾಣಿ 1098ಕ್ಕೆ ಮಾಹಿತಿ ನೀಡುವಂತೆ ತಿಳಿಸಿದರು.

ಅದೇರೀತಿ ರಸ್ತೆ ನಿಯಮಗಳನ್ನು ಪಾಲಿಸದೇ ಇಂದು ಸಾಕಷ್ಟು ಜೀವಗಳು ಬಲಿಯಾಗುತ್ತಿದ್ದು, ದ್ವಿಚಕ್ರವಾಹನಗಳ ಮೇಲೆ ಮೂರು ಜನರ ಸವಾರಿ, ಹೆಲ್ಮೆಟ್ ಧರಿಸದಿರುವುದು, ಲೈಸೆನ್ಸ್ ಇರದೇ ಚಲಾಯಿಸುವುದು, ಕುಡಿದು ವಾಹನ ಚಲಾಯಿಸುವುದು, ಅನವಶ್ಯಕವಾಗಿ ಹಾರ್ನ್ ಹಾಕುವುದು, ಕಣ್ಣಿಗೆ ಅಪಾಯವಾಗುವ ಲೈಟ್‌ಗಳ ಬಳಕೆ ಸೇರಿದಂತೆ ಹಲವು ರೀತಿಯ ತಪ್ಪುಗಳಿಂದ ಸಾಕಷ್ಟು ಸಾವು ನೋವುಗಳು ಸಂಭವಿಸುತ್ತಿದ್ದು, ವೇಗದ ಜೀವನದಲ್ಲಿ ಸ್ವಲ್ಪ ಸಾವಧಾನದಿಂದ ರಸ್ತೆ ನಿಯಮಗಳನ್ನು ಪಾಲಿಸಿ ಮುಂದೆ ನಡೆದರೆ ತಮ್ಮ ಅಮೂಲ್ಯವಾದ ಪ್ರಾಣವನ್ನು ಉಳಿಸಿಕೊಳ್ಳುವುದರ ಜೊತೆಗೆ ದೇಶಕ್ಕೆ ಆಗುವ ನಷ್ಟವನ್ನು ತಪ್ಪಿಸಬಹುದು ಎಂದು ಹೇಳಿದರು.

ಸಂಸ್ಥೆಯ ಆಡಳಿತಾಧಿಕಾರಿ ಮುನ್ನಾ ಸಿರಸಗಿ ಅಧ್ಯಕ್ಷತೆ ವಹಿಸಿದ್ದರು,

ಮುಖ್ಯಗುರುಮಾತೆಯರಾದ ನಯಾರಾಬಾನು ಮಕಾಂದಾರ, ಸಯುನಾಜ ಕುಡಚಿ, ಮಹೇಶ ಬೀರಗುಂಡ, ಕೆ.ಆರ್.ಪಾಟೀಲ, ನಿಂಗರಾಜ ಬಾಬಾಪುರ, ಜಾವೀದ ಜರ್ದಿ ಮತ್ತು ಪೋಲಿಸ್ ಸಿಬ್ಬಂದಿ ವರ್ಗ ಸೇರಿದಂತೆ ಇತರರು ಇದ್ದರು.




## ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರಿಂದ ಅಹೋರಾತ್ರಿ ಧರಣಿ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ತಾಲೂಕಿನ ನಾಗರಬೆಟ್ಟ ಗ್ರಾಮದ ಸರಕಾರಿ ಗುಡ್ಡಗಳ ಸರ್ವೆ ನಂ–51 ಹಾಗೂ 89 ಇವುಗಳಿಗೆ ಸಂಬಂಧಿಸಿದಂತೆ ಸರ್ಕಾರದ ಗೆರೆಯ ಕೆಳಗಿರುವ ವ್ಯಕ್ತಿಗಳ ಹೆಸರುಗಳನ್ನು ಕೈಬಿಡುವಂತೆ ಮತ್ತು ಕೆಲ ರೈತರ ಜಮೀನುಗಳಿಗೆ ರಸ್ತೆ ಮಾಡಿಕೊಡುವ ಬೇಡಿಕೆಗಳನ್ನು ಮುಂದಿಟ್ಟು ನಾಗರಬೆಟ್ಟ ಗ್ರಾಮದ ರೈತರು ಸೋಮವಾರ ಅಹೋರಾತ್ರಿ ಧರಣಿ ಆರಂಭಿಸಿದರು.

ಈ ವೇಳೆ ತಾಲೂಕು ರೈತ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಎಂ.ಎಸ್.ಸಿದರೆಡ್ಡಿ ಮಾತನಾಡಿ, ನಮ್ಮ ಗ್ರಾಮದ ಎರಡೂ ಗುಡ್ಡಗಳ ಸಮಸ್ಯೆಯನ್ನು ಬಗೆಹರೆಸುವಂತೆ ಈಗಾಗಲೇ ತಹಶೀಲ್ದಾರಗೆ ಮನವಿ ಪತ್ರ ಸಲ್ಲಿಸಿದ್ದೇವೆ. ಮತ್ತು ಸಮಸ್ಯೆ ಬಗೆಹರೆಯದಿದ್ದರೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುವುದಾಗಿ ಈ ಮೊದಲೇ ತಿಳಿಸಿದ್ದರೂ ನಮ್ಮ ಸಮಸ್ಯೆ ಬಗೆಹರೆದಿಲ್ಲ. ಹಾಗಾಗಿ ಧರಣಿ ಆರಂಭಿಸಿದ್ದೇವೆ. ಅಧಿಕಾರಿಗಳು ಕೇವಲ ಜನ ಪ್ರತಿನಿಧಿಗಳ ಮಾತನ್ನು ಕೇಳುತ್ತಾರೆ. ರೈತರ ಕಷ್ಟಕ್ಕೆ ಸ್ಪಂದಿಸುವದಿಲ್ಲ ಎಂಬುದು ಮತ್ತೊಮ್ಮೆ ಖಚಿತವಾಗಿದೆ. ಕಳೆದ ಕೆಲ ವರ್ಷಗಳ ಹಿಂದೆ ಬಸರಕೋಡ ಗ್ರಾಮದಲ್ಲಿ ಇಂಥದ್ದೇ ಸಮಸ್ಯೆ ಇದ್ದ ಜಮೀನೊಂದನ್ನ ಜನಪ್ರತಿನಿಧಿಯ ಆಜ್ಞೆಯಂತೆ ಬದಲಾಯಿಸಿದ್ದಾರೆ. ಆದರೆ ನಮ್ಮ ಮನವಿಗೆ ಯಾವುದೇ ಪ್ರತಿಕ್ರಿಯೆ ಇಲ್ಲ. ಇದು ಸಧ್ಯದ ಪ್ರಜಾಪ್ರಭುತ್ವದ ವ್ಯವಸ್ಥೆಯಾಗಿದೆ. ಇಲ್ಲಿ ಹಣ ಅಧಿಕಾರ ಇರುವವರ ಮಾತುಗಳನ್ನು ಮಾತ್ರ ಅಧಿಕಾರಿಗಳು ಕೇಳುತ್ತಾರೆ ವಿನಃ ರೈತರ ಕಷ್ಟಕ್ಕೆ ಸ್ಪಂದಿಸಲ್ಲ ಎಂದು ಅಧಿಕಾರಿಗಳ ವಿರುದ್ಧ ಹರಿಹಾಯ್ದರು.

ಹೋರಾಟದಲ್ಲಿ ಗ್ಯಾನಪ್ಪ ರಕ್ಕಸಗಿ, ಶರಣಪ್ಪ ದಡ್ಡಿ, ಪರಮಪ್ಪ ಗುರಿಕಾರ, ಶಾಂತಗೌಡ ಸಿದರೆಡ್ಡಿ, ಹಣಮಂತ ಜಾಲಿಬೆಂಚಿ, ನಿಂಗಪ್ಪ ಹುರಿಕಾರ, ಬಸಪ್ಪ ಟಕ್ಕಳಕಿ, ನಿಂಗಪ್ಪ ರಕ್ಕಸಗಿ, ಕೆ.ಬಿ.ಮುರಾಳ, ಮಾಂತಯ್ಯ ಮಠ, ಶಂಕರಗೌಡ ಸಿದರೆಡ್ಡಿ, ಜುಮ್ಮಣ್ಣ ಟಕ್ಕಳಕಿ, ನಾನಾಗೌಡ ಸಿದರೆಡ್ಡಿ ಸೇರಿದಂತೆ ಮತ್ತಿತರರು ಇದ್ದರು.



# ನಾವೆಲ್ಲ ಪ್ರಕೃತಿಯನ್ನು ಸಂರಕ್ಷಿಸಬೇಕು :ಡಿಸಿ ಟಿ.ಭೂಬಾಲನ್

ಉದಯರಶ್ಮಿ ನ್ಯೂಸ್



ವಿಜಯಪುರ: ಪರಿಸರ ಮತ್ತು ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಹಾಗೂ ಅರಣ್ಯೀಕರಣಕ್ಕಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರ ಕನಸಿನ ವೃಕ್ಷೋಥಾನ್ ಹೆರಿಟೇಜ್ ರನ್-2023ನ್ನು ಯಶಸ್ವಿಗೊಳಿಸಲು ಎಲ್ಲರೂ ಶ್ರಮಿಸೋಣ ಎಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಹೇಳಿದ್ದಾರೆ.

ವೃಕ್ಷೋಥಾನ್ ಹೆರಿಟೇಜ್ ರನ್-2023ರ ಅಂಗವಾಗಿ ಇಂದು ಮಂಗಳವಾರ ನಗರದ ಐತಿಹಾಸಿಕ ಗಗನ ಮಹಲ್ ನಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಪ್ರೌಢಶಾಲೆಗಳ ಬಾಲಕ ಮತ್ತು ಬಾಲಕಿಯರಿಗಾಗಿ ಆಯೋಜಿಸಿದ್ದ ಐತಿಹಾಸಿಕ ಸ್ಮಾರಕಗಳ ಹಾಗೂ ಪರಿಸರ ರಕ್ಷಣೆ ಕುರಿತು ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಸ್ವತಃ ಗೋಳಗುಮ್ಮಟ ಚಿತ್ರ ಬಿಡಿಸುವ ಮೂಲಕ ಅವರು ಉದ್ಘಾಟಿಸಿ ಮಾತನಾಡಿದರು.

ವಿಜಯಪುರ ಜಿಲ್ಲೆಯಲ್ಲಿ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಸ್ಮಾರಕಗಳು, ದೇವಾಲಯಗಳು, ಜೈನ ಬಸದಿಗಳಿವೆ. ಮುಂದಿನ ಪೀಳಿಗೆಗಾಗಿ ಇವುಗಳನ್ನು ಪೋಷಿಸಿ ರಕ್ಷಣೆ ಮಾಡುವುದ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ನಮ್ಮ ಜಿಲ್ಲೆಯಲ್ಲಿ ಅರಣ್ಯೀಕರಣದ ಕೊರತೆ ಇರುವ ಹಿನ್ನೆಲೆಯಲ್ಲಿ ಸಚಿವ ಎಂ. ಬಿ. ಪಾಟೀಲ ಅವರು ಕೋಟಿ ವೃಕ್ಷ ಅಭಿಯಾನದ ಅಂಗವಾಗಿ ಈಗಾಗಲೇ ಮರಗಳನ್ನು ಬೆಳೆಸಿದ್ದಾರೆ. ಈ ಅಭಿಯಾನದ ಮುಂದುವರೆದ ಭಾಗವಾಗಿ ಈಗ ವೃಕ್ಷೋಥಾನ್ ಹೆ-ರಿಟೇಜ್ ರನ್- 2023 ನಡೆಯುತ್ತಿದೆ. ಸಚಿವರ ಕನಸಿನ ಈ ಯೋಜನೆ ನನಸು ಮಾಡಲು ನಾವೆಲ್ಲರೂ ಕಾಡನ್ನು ಬೆಳೆಸೋಣ ಎಂದು ಅವರು ಹೇಳಿದರು.

ಹೆರಿಟೇಜ್ ರನ್-2023ರಲ್ಲಿ ಸುಮಾರು 10 ಸಾವಿರ ಓಟಗಾರರು ಭಾಗವಹಿಸುತ್ತಿದ್ದು, ತಾವೆಲ್ಲರೂ ಪರಿಸರ ಕಾಪಾಡುವಲ್ಲಿ ಓರ್ವ ರಾಯಭಾ-ರಿಯಾಗಿ ಪ್ರಕೃತಿಯನ್ನು ಸಂರಕ್ಷಿಸಬೇಕು. ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಕೋಟಿ ವೃಕ್ಷ ಅಭಿಯಾನದ ಸಂಚಾಲಕ ಡಾ. ಮುರುಗೇಶ ಪಟ್ಟಣಶಟ್ಟಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಡಾ. ಎನ್. ಎಚ್. ನಾಗೂರ, ಎಂ. ಪಿ. ಕುಪ್ಪಿ, ನೋಡೆಲ್ ಅಧಿಕಾರಿ ಅಂಬಣ್ಣ ಲಾಳಸೇರಿ ಮುಂತಾದವರು ಉಪಸ್ಥಿತ-ರಿದ್ದರು.

ಈ ಸಂದರ್ಭದಲ್ಲಿ ಪಠ್ಯಪುಸ್ತಕ ಪರಿಷ್ಕರಣೆ ಸಂಪನ್ಮೂಲ ವ್ಯಕ್ತಿ ಮಂಜುನಾಥ ಮಾನೆ, ಆನಂದ ಝುಂಡೆ, ರಮೇಶ ಚವ್ಹಾಣ, ಬಿ. ಎಸ್. ಪಾಟೀಲ, ಭಜಂತ್ರಿ, ರಾಜಕುಮಾರ ವಾಲಿಕಾರ, ಎಂ. ಕೆ. ಗಾಡಿವಡ್ಡರ, ಬಂದೇನವಾಜ್, ಎಸ್. ಸಿ. ಹೂಗಾರ, ಶಿವಣ್ಣವರ, ಚಿತ್ರಕಲಾ ಶಿಕ್ಷಕರು, ಹಾಗೂ ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ್ದ 50ಕ್ಕೂ ಬಾಲಕ ಮತ್ತು ಬಾಲಕಿಯರು ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ ಪಾಲ್ಗೊಂಡರು. ಹುಮಾಯೂನ ಎ. ಮಮದಾಪೂರ ನಿರೂಪಿಸಿದರು.

# ದುಷ್ಟ ವ್ಯಕ್ತಿಗಳಿಗೆ ಕಾನೂನಿನಿಂದ ಶಿಕ್ಷೆ ಸಾಧ್ಯ :ಪಿಎಸ್‌ಐ ಹಳ್ಳಿ

ಉದಯರಶ್ಮಿ ನ್ಯೂಸ್



ಇಂಡಿ: ವಿದ್ಯಾರ್ಥಿಗಳ ಮೇಲೆ ಹಲ್ಲೆ, ದೌರ್ಜನ್ಯ ನಡೆದಾಗ ಸುಮ್ಮನೆ ಕೂಡಬಾರದು, ಕೂಡಲೇ ಪಾಲಕರ ಅಥವಾ ಶಿಕ್ಷಕರ ಗಮನಕ್ಕೆ ತರಬೇಕು, ಕಾನೂನಿನ ಮೂಲಕ ಕೆಟ್ಟ ದುಷ್ಟ ವ್ಯಕ್ತಿಗಳಿಗೆ ಸರಿಯಾದ ಬುದ್ದಿ ಕಲಿಸಲು ಸಾಧ್ಯ ಎಂದು ಪಿಎಸ್‌ಐ ರೇಣುಕಾ ಹಳ್ಳಿ ಹೇಳಿದರು.

ಪಟ್ಟಣದ ಗಾಂಧಿ ಬಜಾರದಲ್ಲಿರುವ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯಲ್ಲಿ ನಗರ ಪೊಲೀಸ್ ಠಾಣಾ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ಅಪರಾಧ ತಡೆ ಮಾಸಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಕಾನೂನಿನ ಬಗ್ಗೆ ಗೌರವ ಹಾಗೂ ಪ್ರಸ್ತುತ ಸಮಾಜದಲ್ಲಿ ಸ0ಭವಿಸುತ್ತಿರುವ ಘಟನೆಗಳ ಬಗ್ಗೆ ಮುಂಜಾಗ್ರತೆ ವಹಿಸಿದರೆ ನಡೆಯುತ್ತಿರುವ ಅಪರಾಧಗಳನ್ನು ತಡೆಗಟ್ಟಲು ಸಾಧ್ಯ ಎಂದು ಹೇಳಿದರು.

ಪ್ರಸ್ತುತ ಸಮಾಜದಲ್ಲಿ ಒಂದಲ್ಲ ಒಂದು ರೀತಿಯ ಅಪರಾಧಗಳಾಗುತ್ತಿವೆ. ಕಾನೂನಿನ ಬಗ್ಗೆ ಅವರಿಗಿರುವ ತಾತ್ಸಾರ ಮನೋಭಾವನೆಯೇ ಇದಕ್ಕೆ ಕಾರಣ. ಇಂಥ ಪ್ರಕರಣಗಳ ಬಗ್ಗೆ ವಿದ್ಯಾರ್ಥಿ, ಸಾರ್ವಜನಿಕ ವಲಯದಲ್ಲಿ ಜಾಗೃತಿ ಮೂಡಿಸಿ ಅಪರಾಧ ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಅಪರಾಧ ತಡೆಗಟ್ಟುವ ಮಾಸಾಚರಣೆ ಆಯೋಜಿಸಲಾಗಿದೆ ಎಂದರು.

ವಿದ್ಯಾರ್ಥಿ ಸಮೂಹದ ಮೇಲೆ ಅಪರಾಧ ತಡೆಗಟ್ಟುವ ಗುರುತರ ಜವಾಬ್ದಾರಿ ಇದ್ದು, ಮೊದಲು ವಿದ್ಯಾರ್ಥಿಗಳು ಜಾಗೃತಿಗೊಂಡು ಸಾರ್ವಜನಿಕರಿಗೆ ತಿಳಿ ಹೇಳುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಮುಖ್ಯಗುರು ಯು ಎಚ್ ಚವ್ಹಾಣ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇನ್ನು ಪಿಎಸ್ ಐ ಶಶಿಕಲಾ ಹಾಗೂ ಎ ಎಸ್ ಐ ಎಮ್ ಎಸ್ ಅರವತ್ತಿ ಕಾನೂನು ಅರಿವು ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಸಹ ಶಿಕ್ಷಕ ಎನ್ ಎ ಬಿರಾದಾರ, ಎಮ್ ಎ ಲಕ್ಡರ್, ಕೆ ಎಚ್ ಹೊಸಮನಿ, ಎಸ್ ಎಸ್ ಕಾಂಬಳೆ ಹಾಗೂ ಪೋಲಿಸ್ ಸಿಬ್ಬಂದಿ ಉಪಸ್ಥಿತರಿದ್ದು, ಪಿಜಿ ಕಲ್ಮನಿ ಶಿಕ್ಷಕರು ನಿರೂಪಿಸಿದರು.

# ಮಕ್ಕಳಿಗೆ ಪಾಠದ ಜೊತೆ ಆಟವೂ ಮುಖ್ಯ :ಬಿರಾದಾರ

ಉದಯರಶ್ಮಿ ನ್ಯೂಸ್



ವಿಜಯಪುರ: ಮಕ್ಕಳಿಗೆ ಪಾಠಗಳ ಜೊತೆಗೆ ಆಟವೂ ತುಂಬಾ ಮುಖ್ಯ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ ಮತ್ತು ದೈಹಿಕವಾಗಿ ಸದೃಡರಾಗಲು ಸಾಧ್ಯ ಎಂದು ಸೈಕ್ಲಿಂಗ್ ಅಮೇಚೂರ ಸಂಘದ ರಾಜ್ಯಾಧ್ಯಕ್ಷ ರಾಜು ಬಿರಾದಾರ ಹೇಳಿದ್ದಾರೆ.

ನಗರದ ಪ್ರತಿಷ್ಠಿತ ಬಿಎಲ್‌ಡಿಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್ ಶಾಲೆಯಲ್ಲಿ ಶುಕ್ರವಾರ ನಡೆದ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಗಳಲ್ಲಿಯೂ ಶ್ರಮವಹಿಸಿ ಶ್ರದ್ದೆಯಿಂದ ತೊಡಗಿಸಿಕೊಂಡರೆ ರಾಷ್ಟ್ರೀಯ ಅಷ್ಟೇ ಅಲ್ಲ, ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಸಾಧನೆ ಮಾಡಿ ಜೀವನ ರೂಪಿಸಿಕೊಳ್ಳಬಹುದು. ಅಲ್ಲದೇ, ದೇಶದ ಕೀರ್ತಿ ಪತಾಕೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿಯಬಹುದು. ಅಲ್ಲದೆ ಕ್ರೀಡಾಪಟುಗಳಿಗೆ ಸರಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗ ಮಿಸಲಾತಿ ನೀಡಲಾಗುತ್ತಿದೆ ಎಂದು ತಿಳಿಸಿದ ಅವರು, ಕ್ರೀಡಾ ಸಾಧಕರ ಸಾಧನೆ ಮತ್ತು ಕೊಡುಗೆಯನ್ನು ಉದಾಹರಣೆ ಸಹಿತ ವಿವರಿಸಿದರು.

ಬಿ ಎಲ್ ಡಿ ಇ ಸಂಸ್ಥೆಯ ಕ್ರೀಡಾ ನಿರ್ದೇಶಕ ಪ್ರೊ. ಎಸ್. ಎಸ್. ಕೋರಿ ಅವರು ಮಕ್ಕಳ ಕವಾಯತ್ ನಮನವನ್ನು ಸ್ವೀಕರಿಸಿದರು. ಶಾಲಾ ಆಡಳಿತಾಧಿಕಾರಿ ಕೌಶಿಕ್ ಬ್ಯಾನರ್ಜಿ ಅವರು ಕ್ರೀಡಾಜ್ಯೋತಿಗೆ ಚಾಲನೆ ನೀಡಿದರು. ಜುಂಬಾ ನೃತ್ಯ, ಕಂಸಾಳೆ ಕುಣಿತ, ಯೋಗ, ಕರಾಟೆ ಪ್ರದರ್ಶನ, ಪ್ರೇಕ್ಷಕರನ್ನು ರಂಜಿಸಿದವು. ನಂತರ ರಿಲೆ, 100 ಮೀ. ಮತ್ತು 200 ಮೀ ಅಂತಿಮ ಸುತ್ತಿನ ಓಟದ ಸ್ಪರ್ಧೆಗಳು ಹಾಗೂ ನಾನಾ ಬಗೆಯ ಕ್ರೀಡೆಗಳುಗಮನ ಸೆಳೆದವು. ವಿಜೇತ ಸದನದ ತಂಡಕ್ಕೆ ಅಥಿತಿಗಳು ಟ್ರೋಪಿ ವಿತರಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಪ್ರಾಚಾರ್ಯೆ ಬಂಧನಾ ಬ್ಯಾನರ್ಜಿ, ಹಿರಿಯ ಕಾರ್ಯ ಸಂಯೋಜಕಿ ದೀಪಾ ಜಂಬೂರೆ, ಜಲನಗರ ಉಪಶಾಖೆಯ ಪ್ರಾಚಾರ್ಯ ದರ್ಶನ ಹುನಗುಂದ ಉಪಸ್ಥಿತರಿದ್ದರು.

ಆಂಗ್ಲ ಭಾಷಾ ಮುಖ್ಯಸ್ಥೆ ನೀತಾ ಮಠ ನಿರೂಪಿಸಿದರು. ವಿಜ್ಞಾನ ಶಿಕ್ಷಕಿ ಸಾಯಿರಾ ಶೇಖ್ ವಂದಿಸಿದರು.

# ಟೆನಿಸ್ ಬಾಲ್ ಕ್ರಿಕೆಟ್: ರಾಜ್ಯ ಮಟ್ಟಕ್ಕೆ ಆಯ್ಕೆ

ಉದಯರಶ್ಮಿ ನ್ಯೂಸ್



ವಿಜಯಪುರ: ಕರ್ನಾಟಕ ರಾಜ್ಯ ಟೇನಿಸ್ ಬಾಲ್ ಕ್ರಿಕೆಟ್ ಅಸೋಸಿಯೇಶನ್ ವತಿಯಿಂದ ಉತ್ತರ ಪ್ರದೇಶದಲ್ಲಿ ಡಿ.27 ರಿಂದ 30 ರವರೆಗೆ ಜರಗುವ 2023ನೇ ಸಾಲಿನ 2ನೇ ಜ್ಯೂನಿಯರ್ ನ್ಯಾಷನಲ್ ಟೆನಿಸ್ ಬಾಲ್ ಕ್ರಿಕೆಟ್ ಚಾಂಪಿಯನ್‌ಶಿಪ್ ನಡೆಯುತ್ತಲಿದ್ದು, ಅಭಿಷೇಕ ತಂ. ವಾಸು ಚವ್ಹಾಣ ಈತನು ನಮ್ಮ ಅಸೋಸಿಯೇಶನ್ ವತಿಯಿಂದ ರಾಜ್ಯ ಮಟ್ಟಕ್ಕೆ ಆಯ್ಕೆ ಆಗಿದ್ದಾನೆಂದು ಕ್ರಿಕೆಟ್ ಅಸೋಸಿಯೇಶನ್ ಅಧ್ಯಕ್ಷೆ ಶಾಹೀದಾಬೇಗಂ, ಕಾರ್ಯದರ್ಶಿ ಡಾ. ಅಶೋಕಕುಮಾರ ಜಾಧವ ಹಾಗೂ ಕೋಟ್ ಸಲೀಮ ಬೇಪಾರಿ, ಮ್ಯಾನೇಜರ್ ಮೋಹನ ಚವ್ಹಾಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿ ಭಗವತಿ ನಿಧನ

ಉದಯರಶ್ಮಿ ನ್ಯೂಸ್

ವಿಜಯಪುರ: ಇತ್ತೀಚೆಗಷ್ಟೇ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ಆಡಳಿತಾಧಿಕಾರಿ ಹುದ್ದೆಗೆ ಮುಂಬಡ್ತಿ ಪಡೆದು, ಕಾರ್ಯವ್ಯವಸ್ಥೆ ಹಂಚಿಕೆಯಡಿ ಬಾಗಲಕೋಟ ಸಹಾಯಕ ನಿರ್ದೇಶಕ ಹುದ್ದೆಯ ಪ್ರಭಾರದಲ್ಲಿದ್ದ ವಿನೋದಕುಮಾರ್ ಭಗವತಿ(53) ಡಿ.19ರಂದು ಬೆಳಿಗ್ಗೆ ವಿಜಯಪುರ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ತೀವ್ರ ಅನಾರೋಗ್ಯದಿಂದ ಕಳೆದ ಸುಮಾರು ಒಂದು ತಿಂಗಳಿನಿಂದ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಹುಬ್ಬಳ್ಳಿ ರಾಜ್ಯ ಸಮಾಚಾರ ಕೇಂದ್ರದಲ್ಲಿ ಅಧೀಕ್ಷಕರಾಗಿ ಕಾರ್ಯನಿರ್ವಹಿಸಿದ್ದ ಅವರು ಪತ್ನಿ, ಇಬ್ಬರು ಪುತ್ರಿಯರು,ಓರ್ವ ಪುತ್ರ ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ.

# ವೃಕ್ಷೊಥಾನ್ ಹೆರಿಟೇಜ್ ರನ್ ರೂಟ್ ಮ್ಯಾಪ್ ಸಿದ್ಧ

ಉದಯರಶ್ಮಿ ನ್ಯೂಸ್

ವಿಜಯಪುರ: ಗುಮ್ಮಟ ನಗ-ರಿಯಲ್ಲಿ ಈ ಬಾರಿ ನಡೆಯುತ್ತಿರುವ ವೃಕ್ಷೊಥಾನ್ ಹೆರಿಟೇಜ್ ರನ್-2023ಕ್ಕೆ 8200ಕ್ಕೂ ಹೆಚ್ಚು ಜನರು ತಮ್ಮ ಹೆಸರು ನೋಂದಾಯಿಸಿದ್ದು, ಡಿ. 23 ರಂದು ಶನಿವಾರ ಸ್ಥಳದಲ್ಲಿಯೇ ಹೆಸರು ನೋಂದಾವಣಿಗೆ ಕೊನೆಯ ಅವಕಾಶ ಕಲ್ಪಿಸಲಾಗಿದೆ. ಅಷ್ಟೇ ಅಲ್ಲ, ನಾನಾ ವಿಭಾಗಗಳಲ್ಲಿ ನಡೆಯಲಿರುವ ಈ ಓಟದ ರೂಟ್ ಮ್ಯಾಪ್ ಕೂಡ ಸಿದ್ಧವಾಗಿದ್ದು, ಕಾರ್ಯಕ್ರಮದ ಯಶಸ್ಸಿಗೆ ಸಿದ್ಧತೆಗಳು ಭರದಿಂದ ಸಾಗಿವೆ. ಈ ಕುರಿತು ಸಂಪೂರ್ಣ ಮಾಹಿತಿ ಇಲ್ಲಿದೆ.

ಪರಿಸರ ಮತ್ತು ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಜನಜಾಗೃತಿ ಹಾಗೂ ಶತಮಾನದ ಸಂತ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಗೌರವಾರ್ಥ ಆಯೋಜಿಸಲಾಗಿರುವ ಈ ಓಟಕ್ಕೆ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಖ್ಯಾತಿಯ ಪುರುಷ ಮತ್ತು ಮಹಿಳಾ ಓಟಗಾರರು ಸೇರಿದಂತೆ ಈ ಬಾರಿ 8200ಕ್ಕೂ ಹೆಚ್ಚು ಓಟಗಾರರು ಆನಲೈನ್ ಮೂಲಕ ಹೆಸರು ನೋಂದಾಯಿಸಿದ್ದಾರೆ.

21 ಕಿ. ಮಿ. ವಿಭಾಗದಲ್ಲಿ 525 ಜನ, 10 ಕಿ. ಮೀ. ವಿಭಾಗದಲ್ಲಿ 250 ಜನ, 5 ಕಿ. ಮೀ. ವಿಭಾಗದಲ್ಲಿ 1200 ಜನ, 3.50 ಕಿ. ಮೀ ವಿಭಾಗದಲ್ಲಿ 6000 ಹಾಗೂ 800 ಮೀ. ವಿಭಾಗದಲ್ಲಿ 51 ಜನ ಓಟಗಾರರು ಆನಲೈನ್ ಮೂಲಕ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಈಗಾಗಲೇ ಆನಲೈನ್ ನೋಂದಣಿ ಮುಕ್ತಾಯಗೊಂಡಿದ್ದರೂ, ಸಾರ್ವಜನಿಕರ ಒತ್ತಾಯದ ಹಿನ್ನೆಲೆಯಲ್ಲಿ ಡಿ. 23 ರಂದು ಶನಿವಾರ ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಳಲ್ಲಿ ಬೆಳಿಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಸ್ಥಳದಲ್ಲಿಯೇ ನೋಂದಣಿ ಮಾಡಿಕೊಳ್ಳಲಾಗುವುದು. ಕೆಲವೇ ಪ್ರವೇಶಗಳು ಬಾಕಿ ಇವೆ. ಅಲ್ಲದೇ, ಈ ಸಂದರ್ಭದಲ್ಲಿ ಬಿಬ್, ಟಿ-ಶರ್ಟ್ ವಿತರಣೆ ಮಾಡಲಾಗುತ್ತಿದೆ ಎಂದು ವೃಕ್ಷೊಥಾನ್ ಹೆರಿಟೇಜ್ ರನ್- 2023 ನೋಂದಣಿ ಸಮಿತಿಯ ಡಾ. ಮಲ್ಲಿಕಾರ್ಜುನ ಯಲಗೊಂಡ ಮತ್ತು ವೀರೇಶ ಗುಜ್ಜೆಟ್ಟಿ ತಿಳಿಸಿದ್ದಾರೆ.

ರೂಟ್ ಮ್ಯಾಪ್ ಮಾಹಿತಿ ಇಲ್ಲಿದೆ.

ಈ ಮಧ್ಯೆ, ನಾನಾ ವಿಭಾಗಗಳಲ್ಲಿ ನಡೆಯಲಿರುವ ಓಟಗಳ ರೂಟ್ ಮ್ಯಾಪ್(ಮಾರ್ಗ ನಕ್ಷೆ)ಯನ್ನು ರೂಟ್ ಸಮಿತಿಯ ಸಂಕೇತ ಬಗಲಿ ಮತ್ತು ಸೋಮಶೇಖರ ಸ್ವಾಮಿ ಸಿದ್ಧಪಡಿಸಿದ್ದಾರೆ. ಈ ಮಾರ್ಗಗಳಲ್ಲಿ ಅಲ್ಲಲ್ಲಿ ಒಂಬತ್ತು ಕಡೆಗಳಲ್ಲಿ ಜಲಸಂಚಯ(ಹೈಡ್ರೇಶನ್) ಕೇಂದ್ರಗಳನ್ನು ತೆರಯಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ವಿಭಾಗವಾರು ಓಟಗಳ ಪ್ರಾರಂಭ ಮತ್ತು ಮುಕ್ತಾಯದ ರೂಟ್ ಮ್ಯಾಪ್ ಮತ್ತು ಹೈಡ್ರೆಶನ್ ಕೇಂದ್ರಗಳ ಮಾಹಿತಿ ಇಲ್ಲಿದೆ.

21 ಕಿ. ಮೀ. ವಿಭಾಗ

ಸಮಯ: ಪ್ರಾರಂಭ ಬೆಳಿಗ್ಗೆ 6 ಗಂಟೆ, ಮುಕ್ತಾಯ ಸಮಯ- ಬೆಳಿಗ್ಗೆ 9.30ರೊಳಗೆ

ಓಟ ಪ್ರಾರಂಭ ಸ್ಥಳ: ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ

ಮಾರ್ಗ- ಜಿಲ್ಲಾ ಕ್ರೀಡಾಂಗಣದಿಂದ ಸ್ಟೇಷನ್ ರಸ್ತೆಯ ಮೂಲಕ ಗೋಲಗುಂಬಜ್ (ಹೈಡ್ರೇಶನ್ ಪಾಯಿಂಟ್), ಮರಳಿ ಅದೇ ರಸ್ತೆಯಲ್ಲಿ ಅಂಬೇಡ್ಕರ್ ಚೌಕ್, ಗಗನ ಮಹಲ್, ಶ್ರೀ ನರಸಿಂಹ ದೇವಸ್ಥಾನ, ಬಾರಾ ಕಮಾನ್(ಹೈಡ್ರೇಶನ್ ಪಾಯಿಂಟ್), ಬಸವೇಶ್ವರ ಚೌಕ್, ಗಾಂಧಿ ಚೌಕ್ (ಹೈಡ್ರೇಶನ್ ಪಾಯಿಂಟ್), ಶಿವಾಜಿ ಚೌಕ್ (ಹೈಡ್ರೇಶನ್ ಪಾಯಿಂಟ್), ವಾಟರ್ ಟ್ಯಾಂಕ್, ಜಿಲ್ಲಾಸ್ಪತ್ರೆ, ಇಟಗಿ ಪೆಟ್ರೋಲ್ ಪಂಪ್ ಬಳಿ ಯು ಟರ್ನ್, ಸೈನಿಕ ಶಾಲೆ ಗೇಟ್ ನಂಬರ್-2, ಮೂಲಕ ಒಳಪ್ರವೇಶ, ಸೈನಿಕ ಶಾಲೆಯ ಮುಖ್ಯ ಕಟ್ಟಡ (ಹೈಡ್ರೇಶನ್ ಪಾಯಿಂಟ್), ಸೈನಿಕ ಶಾಲೆಯ ಗೇಟ್ ನಂಬರ್-1ರ ಮೂಲಕ ನಿರ್ಗಮನ, ವಾಟರ್ ಟ್ಯಾಂಕ್ (ಹೈಡ್ರೇಶನ್ ಪಾಯಿಂಟ್), ದರ್ಗಾ ಕ್ರಾಸ್, ಬಿ.ಎಲ್. ಡಿಇ. ಸಂಸ್ಥೆಯ ಮುಖ್ಯ ಧ್ವಾರದ ಮೂಲಕ ಒಳಪ್ರವೇಶ, ಬಿ.ಎಲ್.ಡಿ.ಇ ಕ್ಯಾಂಪಸ್ (ಹೈಡ್ರೇಶನ್ ಪಾಯಿಂಟ್), ಬಿ.ಎಲ್.ಡಿ.ಇ ಸಂಸ್ಥೆ ಶ್ರೀ ಬಿ. ಎಂ. ಪಾಟೀಲ ಆಸ್ಪತ್ರೆಯ ಮೂಲಕ ನಿರ್ಗಮನ, ಬಿ.ಎಲ್.ಡಿ.ಇ ಸಂಸ್ಥೆ ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜು, ಜ್ಞಾನಯೋಗಾಶ್ರಮದಲ್ಲಿ ಒಳಪ್ರವೇಶ (ಹೈಡ್ರೇಶನ್ ಪಾಯಿಂಟ್), ಮತ್ತು ಜ್ಞಾನಯೋಗಾಶ್ರಮದಿಂದ ನಿರ್ಗಮನ, ಆಶ್ರಮ ರಸ್ತೆ, ಶ್ರೀ ಸಿದ್ಧೇಶ್ವರ ದೇವಸ್ಥಾನ (ಹೈಡ್ರೇಶನ್ ಪಾಯಿಂಟ್), ಗಾಂಧಿ ಚೌಕ್ (ಹೈಡ್ರೇಶನ್ ಪಾಯಿಂಟ್), ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ(ಮುಕ್ತಾಯ).

10 ಕಿ. ಮೀ. ವಿಭಾಗ

ಸಮಯ: ಪ್ರಾರಂಭ ಬೆಳಿಗ್ಗೆ 6.45 ಗಂಟೆ, ಮುಕ್ತಾಯ ಸಮಯ- ಬೆಳಿಗ್ಗೆ 8.45ರೊಳಗೆ

ಓಟ ಪ್ರಾರಂಭ ಸ್ಥಳ: ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ

ಮಾರ್ಗ- ಜಿಲ್ಲಾ ಕ್ರೀಡಾಂಗಣದಿಂದ ಸ್ಟೇಷನ್ ರಸ್ತೆಯ ಮೂಲಕ




ಗೋಲಗುಂಬಜ್ (ಹೈಡ್ರೇಶನ್ ಪಾಯಿಂಟ್), ಮರಳಿ ಅದೇ ರಸ್ತೆಯಲ್ಲಿ ಅಂಬೇಡ್ಕರ್ ಚೌಕ್, ಗಗನ ಮಹಲ್, ಶ್ರೀ ನರಸಿಂಹ ದೇವಸ್ಥಾನ, ಬಾರಾ ಕಮಾನ್(ಹೈಡ್ರೇಶನ್ ಪಾಯಿಂಟ್), ಬಸವೇಶ್ವರ ಚೌಕ್, ಗಾಂಧಿ ಚೌಕ್ (ಹೈಡ್ರೇಶನ್ ಪಾಯಿಂಟ್), ಶಿವಾಜಿ ಚೌಕ್ (ಹೈಡ್ರೇಶನ್ ಪಾಯಿಂಟ್), ವಾಟರ್ ಟ್ಯಾಂಕ್, ಸೆಟಲೈಟ್ ಬಸ್ ನಿಲ್ದಾಣದಿಂದ ಯು ಟರ್ನ್, ಮರಳಿ ಅದೇ ಮಾರ್ಗವಾಗಿ ವಾಟರ್ ಟ್ಯಾಂಕ್ (ಹೈಡ್ರೇಶನ್ ಪಾಯಿಂಟ್), ಶಿವಾಜಿ ಚೌಕ್, ಗಾಂಧಿಚೌಕ್ (ಹೈಡ್ರೇಶನ್ ಪಾಯಿಂಟ್), ಬಾರಾ ಕಮಾನ, ಡಾ. ಬಿ. ಆರ್. ಅಂಬೇಡ್ಕರ್ ಕ್ರೀಡಾಂಗಣ(ಮುಕ್ತಾಯ).

5 ಕಿ. ಮೀ. ವಿಭಾಗ

ಸಮಯ: ಪ್ರಾರಂಭ ಬೆಳಿಗ್ಗೆ 7.30 ಗಂಟೆ, ಮುಕ್ತಾಯ ಸಮಯ- ನಿಗದಿ ಇಲ್ಲ.

ಓಟ ಪ್ರಾರಂಭ ಸ್ಥಳ: ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ

ಮಾರ್ಗ- ಜಿಲ್ಲಾ ಕ್ರೀಡಾಂಗಣದಿಂದ ಸ್ಟೇಷನ್ ರಸ್ತೆಯ ಮೂಲಕ ಗೋಲಗುಂಬಜ್ (ಹೈಡ್ರೇಶನ್ ಪಾಯಿಂಟ್), ಮರಳಿ ಅದೇ ರಸ್ತೆಯಲ್ಲಿ ಅಂಬೇಡ್ಕರ್ ಚೌಕ್, ಬಸವೇಶ್ವರ ಚೌಕ್, ಗಾಂಧಿ ಚೌಕ್ (ಹೈಡ್ರೇಶನ್ ಪಾಯಿಂಟ್) ಯೂ ಟರ್ನ್, ಬಾರಾ ಕಮಾನ, ಡಾ. ಬಿ. ಆರ್. ಅಂಬೇಡ್ಕರ್ ಕ್ರೀಡಾಂಗಣ(ಮುಕ್ತಾಯ).

3.50 ಕಿ. ಮೀ. ವಿಭಾಗ

ಸಮಯ: ಪ್ರಾರಂಭ ಬೆಳಿಗ್ಗೆ 8 ಗಂಟೆ, ಮುಕ್ತಾಯ ಸಮಯ- ನಿಗದಿ ಇಲ್ಲ.

ಓಟ ಪ್ರಾರಂಭ ಸ್ಥಳ: ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ

ಮಾರ್ಗ- ಜಿಲ್ಲಾ ಕ್ರೀಡಾಂಗಣದಿಂದ ಸ್ಟೇಷನ್ ರಸ್ತೆಯ ಮೂಲಕ ಗೋಲಗುಂಬಜ್ (ಹೈಡ್ರೇಶನ್ ಪಾಯಿಂಟ್), ಮರಳಿ ಅದೇ ರಸ್ತೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಕ್ರೀಡಾಂಗಣ(ಮುಕ್ತಾಯ).

800 ಮೀಟರ್ ವಿಭಾಗ(ಮಕ್ಕಳಿಗಾಗಿ)

ಸಮಯ: ಪ್ರಾರಂಭ ಬೆಳಿಗ್ಗೆ 8.15 ಗಂಟೆ, ಮುಕ್ತಾಯ ಸಮಯ- ನಿಗದಿ ಇಲ್ಲ.

ಓಟ ಪ್ರಾರಂಭ ಸ್ಥಳ: ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ ಒಳಾಂಗಣ.

ಹೈಡ್ರೇಶನ್ ಪಾಯಿಂಟ್ಸ್

ಈ ಹೈಡ್ರೇಶನ್ ಪಾಯಿಂಟ್ಸ್‌ಗಳಲ್ಲಿ ಓಟಗಾರರು ಮಾರ್ಗ ಮಧ್ಯದಲ್ಲಿ ಬಾಯಾರಿಕೆ ನೀಗಿಸಲು, ದೇಹಕ್ಕೆ ಅಗತ್ಯವಾಗಿರುವ ಉಪ್ಪಿನಂಶ ಮತ್ತೀತರ ಶಕ್ತಿವರ್ಧಕ ಪಾನೀಯಗಳು, ಬಾಳೆಹಣ್ಣು, ಗ್ಲುಕೋಸ್ ಯುಕ್ತ ನೀರಿನ ವ್ಯವಸ್ಥೆ ಇರಲಿದೆ.

ಪಾರ್ಕಿಂಗ್, ವಾಹನ ಸಂಚಾರ ವಿವರ

ನೋಂದಣಿ ಮಾಡಿದವರಿಗೆ ಮಾತ್ರ ಈ ಓಟದಲ್ಲಿ ಪ್ರವೇಶ ಇರುತ್ತದೆ. ಉಳಿದವರಿಗೆ ಈ ಓಟದಲ್ಲಿ ಪ್ರವೇಶ ಇರುವುದಿಲ್ಲ. ಅಲ್ಲದೇ, ಪ್ರತಿಯೊಂದನ್ನು ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಮೇಲ್ವಿಚಾರಣೆ ನಡೆಸಲಾಗುತ್ತದೆ.

ಡಿಸೆಂಬರ್ 24 ರಂದು ವೃಕ್ಷೊಥ-ಾನ್ ಹೆರಿಟೇಜ್ ರನ್-2023 ನಡೆಯುವ ದಿನ ನಸುಕಿನ ಜಾವ ಬೆಳಿಗ್ಗೆ 5.30ರ ಒಳಗೆ ದರಬಾರ ಹೈಸ್ಕೂಲ್ ಮೈದಾನದಲ್ಲಿ ವಾಹನ ಪಾರ್ಕಿಂಗ್ ಮಾಡಬಹುದಾಗಿದೆ. ನಂತರ ಬೆಳಿಗ್ಗೆ 5.30 ರಿಂದ ಬೆಳಿಗ್ಗೆ 9.30ರ ವರೆಗೆ ನಾಲ್ಕು ಗಂಟೆಗಳ ಕಾಲ ರಸ್ತೆಗಳಲ್ಲಿ ಮ್ಯಾರಾಥಾನ್ ಸ್ಪರ್ಧಾಳುಗಳಿಗಾಗಿ ಝೀರೋ ಟ್ರಾಫಿಕ್ ವ್ಯವಸ್ಥೆ ಮಾಡಲಾಗಿದ್ದು, ವಾಹನ ಸಂಚಾರಕ್ಕೆ ಅವಕಾಶ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಮ್ಯಾರಾಥಾನ್ ನಲ್ಲಿ ಪಾಲ್ಗೊಳ್ಳುವವರು ಹಾಗೂ ವೀಕ್ಷಣೆಗೆ ಬರುವ ಸಾರ್ವಜನಿಕರು ನಿಗದಿತ ಸಮಯದಲ್ಲಿ ಪಾರ್ಕಿಂಗ್ ಮಾಡಿ, ಸಹಕರಿಸಬೇಕು ಎಂದು ಸಂಕೇತ ಬಗಲಿ ಮತ್ತು ಸೋಮಶೇಖರ ಸ್ವಾಮಿ ಕೋರಿದ್ದಾರೆ.

ಒಟ್ಟಾರೆ, ವೃಕ್ಷೊಥಾನ್ ಹೆ-ರಿಟೇಜ್ ರನ್- 2023 ಸಂಪೂರ್ಣ ಯಶಸ್ಸಿಗೆ ನಾನಾ ಕೋರ್ ಕಮಿಟಗಳು ಜಿಲ್ಲಾಡಳಿತದ ಸಹಯೋಗದಲ್ಲಿ ಎಲ್ಲ ಸಿದ್ಧತೆಗಳನ್ನು ಕೈಗೊಂಡಿವೆ.

# ಅಪರಾಧ ಕೃತ್ಯಕ್ಕೆ ಕಠಿಣ ಶಿಕ್ಷೆ ತಪ್ಪಿದ್ದಲ್ಲ :ಪಿಎಸ್ಐ ಕಲ್ಲೂರ

ಉದಯರಶ್ಮಿ ನ್ಯೂಸ್




ವಿದ್ಯಾರ್ಥಿಗಳು ಅಪರಾಧ ಪ್ರಕರಣಗಳಲ್ಲಿ ತೊಡಗದೆ ಕಲಿಕೆ ಕೇಂದ್ರವಾಗಿಸಿಕೊಳ್ಳಬೇಕು. ಅಪರಾಧ ಕೃತ್ಯಗಳಲ್ಲಿ ಶಾಮೀಲಾದರೆ ಕಠಿಣ ಶಿಕ್ಷೆ ತಪ್ಪಿದ್ದಲ್ಲ ಎಂದು ಪಟ್ಟಣದ ಜನ ಸ್ನೇಹಿ ಪೊಲೀಸ್ ಠಾಣೆಯ ಪಿಎಸ್‌ಐ ಸಂಜೀವ ಕಲ್ಲೂರ ಎಚ್ಚರಿಸಿದರು.

ಮಂಗಳವಾರ ಪಟ್ಟಣದ ಎಮ್‌ಇಎಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಅಪರಾಧ ತಡೆ ಮಾಸಾಶನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಅವರು ಮಾತನಾಡಿದರು.

ಎಮ್ ಇಎಸ್ ಶಾಲೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಿ ಸಿ ಗಚ್ಚಿನಕಟ್ಟಿ ಮಾತನಾಡಿ, ಮಕ್ಕಳು ಕಾನೂನಿನಡಿ ಯಾವುದೇ ತಪ್ಪು ಮಾಡಿದರೆ ಅದು ಅಪರಾಧವಾಗಿ ಪರಿಗಣಿಸಲಾಗುತ್ತದೆ. ಆದ್ದರಿಂದ ತಪ್ಪು ಎಸಗುವ ಮುನ್ನ ಎಚ್ಚರದಿಂದಿರಬೇಕು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಆಕಾಶ ಭೂಸನೂರ, ಹಿರೇಮಠ ಸರ್. ಮಾಳಿ ಸರ್, ಬೋಧಕ ವರ್ಗ ಮತ್ತು ಪೋಲಿಸ್ ಸಿಬ್ಬಂದಿ ಉಪಸ್ಥಿತರಿದ್ದರು.

## ವಿಶ್ವ ಮಾನವ ಹಕ್ಕುಗಳ ಹಾಗೂ ರಾಷ್ಟ್ರೀಯ ಗ್ರಾಹಕರ ದಿನಾಚರಣೆಯಲ್ಲಿ ನ್ಯಾಯಾಧೀಶೆ ಲಕ್ಷ್ಮೀ ಗರಗ ಕಿವಿಮಾತು

# ಮೋಸಹೋದ ಗ್ರಾಹಕರು ಪ್ರಕರಣ ದಾಖಲಿಸಿ ನ್ಯಾಯ ಪಡೆಯಿರಿ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ದಿನಾಚರಣೆಗಳ ಕುರಿತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರಲ್ಲಿ ಕಾನೂನುಗಳ ಅರಿವು ಮೂಡಿಸುವ ಉದ್ದೇಶವನ್ನು ಕಾನೂನು ಸೇವಾ ಸಮಿತಿ ಹೊಂದಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷೆ ಲಕ್ಷ್ಮೀ ನಿಂಗಪ್ಪ ಗರಗ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಹಾಗೂ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕುರಿತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ಗ್ರಾಹಕ ಯಾವುದೇ ವಸ್ತುವನ್ನು ಖರೀದಿಸುವ ಮೊದಲು ಅದರ ಗುಣಮಟ್ಟ, ಸುರಕ್ಷತೆ, ವಸ್ತುವಿನ ಉತ್ಪಾದನೆ ಮತ್ತು ಅದರ ಕೊನೆಯ ಅವಧಿಯನ್ನು ಪರಿಶೀಲಿಸುವುದರ ಜೊತೆಗೆ ಕಡ್ಡಾಯವಾಗಿ ರಸೀದಿ ಪಡೆಯುವದನ್ನು ಮರೆಯಬಾರದು. ಒಂದು ವೇಳೆ



ನೀವು ಖರೀದಿಸಿದ ವಸ್ತುಗಳಲ್ಲಿ ನಿಮಗೆ ಮೋಸವಾಗಿದ್ದರೆ ಗ್ರಾಹಕರ ನ್ಯಾಯಾಲಯದಲ್ಲಿ ದೂರು ದಾಖಲಿಸಿ ನ್ಯಾಯ ಪಡೆಯಬಹುದಾಗಿದೆ. ಅದರಂತೆ ನಾಗರಿಕ ಸಮಾಜದ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಉದ್ದೇಶದಿಂದ ಘೋಷಿಸಲಾದ ಮಾನವ ಹಕ್ಕುಗಳನ್ನು ಯಾರೊಬ್ಬರೂ ಉಲ್ಲಂಘಿಸಬಾರದು ಎಂದರು.

ಸರ್ಕಾರಿ ಅಭಿಯೋಜಕ ಬಸವರಾಜ ಆಹೇರಿ ಮಾತನಾಡಿ, ಸಂವಿಧಾನ ನೀಡಿದಂತಹ ಹಕ್ಕುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಹಕ್ಕುಗಳ ಚ್ಯುತಿಯಾದಲ್ಲಿ ಕಾನೂನು ಸೇವಾ ಸಮಿತಿಯ ಮೂಲಕ ನೆರವು ಪಡೆದುಕೊಳ್ಳಬಹುದು. ಅದರಂತೆ ಗ್ರಾಹಕರು ಮೋಸಕ್ಕೊಳಗಾದಾಗ ಹೆದರದೇ ಗ್ರಾಹಕರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವುದರ ಮೂಲಕ ಮೋಸಗಾರರಿಗೆ ತಕ್ಕ ಪಾಠ ಕಲಿಸಬಹುದು ಎಂದರು.

"ಇವತ್ತಿನವರೆಗೆ ಮಾನವ ಹಕ್ಕುಗಳ ರಚನೆಗಾಗಿ ಮತ್ತು ಅವುಗಳ ಪಾಲನೆಗಾಗಿ ಸಾಕಷ್ಟು ತೀರ್ಪುಗಳನ್ನು ನ್ಯಾಯಾಲಯಗಳು ನೀಡಿದ್ದು, 1990 ರ ನಂತರ ಮಾನ್ಯ ಉಚ್ಚನ್ಯಾಯಾಲಯ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯಗಳು ಪ್ರಕರಣಗಳನ್ನು ಕಾಪಾಡುವಲ್ಲಿ ಹಿಂದೇಟು ಹಾಕುತ್ತಿವೆ."

**– ಎಸ್.ಎಸ್.ಮಾಲಗತ್ತಿ ನ್ಯಾಯವಾದಿಗಳ ಸಂಘದ ಅಧ್ಯಕ್ಷ, ಮುದ್ದೇಬಿಹಾಳ7**

ನ್ಯಾಯವಾದಿ ಎನ್.ಆರ್.ಮೊಕಾಶಿ ವಿಶೇಷ ಉಪನ್ಯಾಸ ನೀಡಿದರು. ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಸ್.ಎಸ್.ಮಾಲಗತ್ತಿ ಮಾತನಾಡಿದರು.

ತಾಲೂಕು ಕಾನೂನು ಸೇವಾ ಸಮಿತಿಯ ಕಾರ್ಯದರ್ಶಿ ಸಂಪತ್ತ ಕುಮಾರ ಬಳೂಲಗಿಡದ, ಅಪರ ಸರ್ಕಾರಿ ವಕೀಲ ಎಚ್.ಎಲ್.ಸರೂರ, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ಸಾವಳಗಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಮೂರ್ತಿ ಕುಂಬಾರ, ಕ್ರೈಂ ಪಿಎಸ್ಐ ಮನ್ನಾಬಾಯಿ ಇದ್ದರು.

ಈ ವೇಳೆ ನ್ಯಾಯವಾದಿಗಳಾದ ಜೆ.ಎ.ಚಿನಿವಾರ, ಎಸ್.ಆರ್.ಸಜ್ಜನ, ಎಚ್.ವಾಯ್.ಪಾಟೀಲ, ಎಚ್.ಟಿ.ಪೂಜಾರಿ, ಚೇತನ ಶಿವಶಿಂಪಿ, ಸಾಬಣ್ಣ ಚಳ್ಳಗಿ, ಜಾಧವ, ಶ್ರೀದೇವಿ ರಾಜೂರ, ಶೋಭಾ ಬಿರಾದಾರ, ಎಂ.ಎಲ್.ರಿಸಾಲದಾರ ನ್ಯಾಯಾಲಯದ ಸಿಬ್ಬಂದಿಗಳಾದ ಅರವಿಂದ ಕುಂಬಾರ, ಮಹಾಂತೇಶ ಹಚರೆಡ್ಡಿ, ಇಸಾಕ ಒಂಟಿ ಸೇರಿದಂತೆ ಎಲ್ಲ ಸಿಬ್ಬಂದಿ ಇದ್ದರು.

ರವಿ ನಾಲತವಾಡ ವಕೀಲರು ವಂದಿಸಿದರು. ನ್ಯಾ.ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಬಿ.ಗೌಡರ ನಿರೂಪಿಸಿದರು.

ಕಾರ್ಯಕ್ರಮದ ಆಮಂತ್ರಣದಲ್ಲಿ ತಹಶೀಲ್ದಾರ ಬಲರಾಮ ಕಟ್ಟಿಮನಿ ಹಾಗೂ ತಾಲೂಕು ಪಂಚಾಯತ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ಯುವರಾಜ ಹನಗಂಡಿ ಇವರುಗಳ ಹೆಸರಿದ್ದರೂ ಈ ಎರಡೂ ಕಚೇರಿಯಿಂದ ಯಾರೊಬ್ಬರೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದಿರುವುದು ಚರ್ಚೆಗೆ ಗ್ರಾಸವಾಯಿತು.

ನ್ಯಾಯಾಲಯದಲ್ಲಿ ನಡೆದ ಕಾರ್ಯಕ್ರಮಕ್ಕೇ ಪ್ರಮುಖ ಅಧಿಕಾರಿಗಳು ಇಷ್ಟೊಂದು ನಿರ್ಲಕ್ಷ ತೋರಿದ್ದು ಸಾರ್ವಜನಿಕರು ಸುಧಾರಿಸಲು ಹೇಗೆ ಸಾಧ್ಯ ಎಂಬ ಮಾತುಗಳು ಕೇಳಿಬಂದವು.

# ಪ್ರೀತಿಯ ಹಲವು ಮುಖಗಳು

**ಉದಯರಶ್ಮಿ ದಿನಪತ್ರಿಕೆ**

ಪ್ರೀತಿ ಏಕೆ ಭೂಮಿ ಮೇಲಿದೆ?? ಎಂದ ತಕ್ಷಣ ಬರುವ ಮುಂದಿನ ಸಾಲು ಬೇರೆ ಎಲ್ಲೂ ಜಾಗವಿಲ್ಲದೆ!! ಎಂದು. ಚಲನಚಿತ್ರದ ಈ ಗೀತೆ ಖಂಡಿತವಾಗಿಯೂ ನಿಜ. ಏಕೆಂದರೆ ಭೂಮಿಯನ್ನು ಹೊರತುಪಡಿಸಿ ಬೇರೆಲ್ಲೂ ಜೀವ ಸಂಕುಲದ ಉಳಿವಿನ ಅವಶೇಷಗಳು ನಮಗೆ ಪತ್ತೆಯಾಗಿಲ್ಲ. ಚಂದ್ರ ಗ್ರಹ ಮಂಗಳ ಗ್ರಹಗಳಲ್ಲಿ ಜೀವಿಗಳು ಜೀವಿಸಲು ಬೇಕಾದ ಅವಶ್ಯಕತೆಗಳು ಇವೆ ಎಂಬುದೇನೋ ಪತ್ತೆಯಾಗಿದೆ ಆದರೆ ಯಾರಾದರೂ ಜೀವಿಸಿದ್ದರೆ ಎಂದರೆ ನಮಗೆ ಇನ್ನೂ ಅದರ ಬಗ್ಗೆ ಯಾವುದೇ ನಿಖರವಾದ ಮಾಹಿತಿ ಇಲ್ಲ ..ಹಾಗಾಗಿ ಸದ್ಯಕ್ಕೆ ಪ್ರೀತಿ ಏಕೆ ಭೂಮಿ ಮೇಲಿದೆ ಎಂದು ಕೇಳಿದರೆ ಬೇರೆ ಎಲ್ಲೂ ಜಾಗವಿಲ್ಲದೆ

ವೀಣಾಂತರಂಗ



–ವೀಣಾ ಎಚ್. ಪಾಟೀಲ್, ಮುಂಡರಗಿ

ಎಂಬುದೇ ಸರಿ.

ಜಗದ ಸಾಮಾನ್ಯ ಜನರ ಪಾಲಿಗೆ ಪ್ರೀತಿ ಎನ್ನುವುದು ಮಾಯೆಯಾದರೆ , ತಾಯಂದಿರ ಪಾಲಿಗೆ ಪ್ರೀತಿ ಮಮತೆಯ ರೂಪ, ಪತಿ- ಪತ್ನಿಯರ ನಡುವಿನ ಪ್ರೀತಿಗೆ ಪ್ರೇಮ, ಅಣ್ಣ ತಮ್ಮಂದಿರ, ಅಕ್ಕ ತಂಗಿಯರ ನಡುವಿನ ಪ್ರೀತಿ ಸಹೋದರ ವಾತ್ಸಲ್ಯ ಎಂದೂ, ಹಿರಿ ಕಿರಿಯರ ನಡುವಿನ ಪ್ರೀತಿಗೆ ವಾತ್ಸಲ್ಯ ಎಂದು ಹೆಸರು. ಕೆಲವೊಮ್ಮೆ ನಮ್ಮ ಪ್ರೀತಿ ಕರುಣೆಯಿಂದಲೂ ಸಾಧ್ಯವಾದರೆ ಇನ್ನೂ ಹಲವು ಬಾರಿ ನಮ್ಮ ಪ್ರೀತಿ ಭಕ್ತಿ ಯಾಗಿಯೂ ಮಾರ್ಪಾಡಾಗುತ್ತದೆ . ಇಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿದ್ಯಾನಂದ ಶೆಣೈಯವರ ಮಾತು ನೆನಪಾಗುತ್ತದೆ. ಜಗತ್ತಿನ ಎಲ್ಲ ರಾಷ್ಟ್ರಗಳು ದೇಶದ ಬಗೆಗಿನ ಪ್ರೀತಿಯನ್ನು ಹೊಂದಿರುವ ವ್ಯಕ್ತಿಯನ್ನು ದೇಶಪ್ರೇಮಿ ಎಂದು ಕರೆದರೆ ಕೇವಲ ನಮ್ಮ ಭವ್ಯ ಭಾರತ ದಲ್ಲಿ ಓರ್ವ ವ್ಯಕ್ತಿ ಹೊಂದಿರಬಹುದಾದ ದೇಶದ ಬಗೆಗಿನ ಅತ್ಯುನ್ನತ ಪರಾಕಾಷ್ಠೆಯ ಪ್ರೀತಿಯನ್ನು, ಅಭಿಮಾನವನ್ನು ದೇಶಭಕ್ತಿ ಎಂದು ಹೇಳುತ್ತಾರೆ . ಅಂದರೆ ದೇಶದ ಬಗೆಗಿನ ಪ್ರೀತಿ, ಅಭಿಮಾನ ಅತ್ಯಂತ ಗರಿಷ್ಠ ಮಟ್ಟದಲ್ಲಿ ಇದ್ದಾಗ ಮಾತ್ರ ಆ ವ್ಯಕ್ತಿ ದೇಶಭಕ್ತ ಎಂದೆನಿಸಿಕೊಳ್ಳಬಲ್ಲ. ಹಾಗೆ ದೇಶಕ್ಕಾಗಿ ತಮ್ಮ ಜೀವವನ್ನೇ ಒತ್ತೆಯಿಟ್ಟು ಸಹಸ್ರಾರು ಸಂಖ್ಯೆಯ ದೇಶಭಕ್ತರ ಪ್ರೀತಿಯ ನಾಡು ನಮ್ಮದು. ಹಾಗಾದರೆ ಪ್ರೀತಿ ಎಂಬುದು ಕೇವಲ ಒಂದು ಆಯಾಮದಿಂದ ನೋಡುವ ವಿಷಯವಲ್ಲ.ಪ್ರೀತಿ ಎಂಬುದು ಕೇವಲ ಗಂಡು ಹೆಣ್ಣಿನ ಮಧ್ಯದ ಬಾಂಧವ್ಯ, ಹಾರ್ಮೋನುಗಳ ತುಡಿತ, ಹದಿಹರೆಯದ ಮಿಡಿತ ಎಂದು ನಾವು ತಿಳಿದರೆ ನಮ್ಮಷ್ಟು ಮೂರ್ಖರು ಬೇರಾರೂ ಇಲ್ಲ. ಪ್ರೀತಿ ದೈವಿಕ , ಪ್ರೀತಿ ಕಾಳಜಿಯನ್ನು , ಕರುಣೆಯನ್ನು , ಮಮತೆಯನ್ನು, ವಾತ್ಸಲ್ಯವನ್ನು ಬೇಡುತ್ತದೆ. ತನ್ನ ಯಾವುದೇ ಕೆಲಸಗಳನ್ನು ಮಾಡಿಕೊಳ್ಳಲು ಸಾಧ್ಯವಿಲ್ಲದ ಹಸುಗೂಸಿಗೆ ಹೊಟ್ಟೆ ತುಂಬಿಸುವ ಮಲಮೂತ್ರಾದಿಗಳನ್ನು ತೊಳೆಯುವ, ಬಳಿಯುವ ಮಗುವನ್ನು ಸಿಂಗರಿಸಿ, ಮುದ್ದು ಮಾಡುವ, ಪೊರೆಯುವ ಪ್ರೀತಿ ತಾಯಿಯ ಮಮತೆ ವಾತ್ಸಲ್ಯದ ಪ್ರತೀಕ. ಅಲ್ಲಿ ತಾಯಿಯೇ ಆಗಬೇಕೆಂದಿಲ್ಲ , ತಾಯಿ ಮನಸ್ಸಿನ ತಂದೆ, ಅಜ್ಜ, ಅಜ್ಜಿ, ಅತ್ತೆ, ಜೀವ ಜಗತ್ತಿನ ಯಾರಾದರೂ ಆಗಬಹುದು ಅದು ಪ್ರೀತಿ ಎಂದೆನಿಸಿಕೊಳ್ಳುತ್ತದೆ. ಆದರೂ ತಾಯಿಯ ಪ್ರೀತಿಯನ್ನು ಎಲ್ಲರೂ ಜಗತ್ತಿನ ಮಹಾನ್ ಪ್ರೀತಿ ಎಂದು ಹೇಳುತ್ತಾರೆ. ನಮ್ಮ ಹಿಂದಿನ ಹಿರಿಯರಂತೂ ತಾಯಿ ಮತ್ತು ಮಗುವಿನ ಮಧ್ಯದ ಪ್ರೀತಿಯನ್ನ ವಾತ್ಸಲ್ಯದ ಮಹಾಕಾವ್ಯ ಎಂದು ಕರೆದರು ಏಕೆ ಗೊತ್ತೆ?? ತಾಯಿಯ ಪ್ರೀತಿಯಲ್ಲಿ ಸ್ವಾರ್ಥದ ಸುಳಿವಿಲ್ಲ , ಅದು ನಿಸ್ವಾರ್ಥ, ನಿರ್ವ್ಯಾಜ್ಯ ಪ್ರೇಮ. ದಿನದ ಇಪ್ಪತ್ತನಾಲ್ಕು ಗಂಟೆಯನ್ನು ತನ್ನ ಮಗುವಿಗಾಗಿ ಮೀಸಲಿಡುವ ತಾಯಿ ಹಗಲು -ರಾತ್ರಿ , ತಿಂಗಳು- ವರ್ಷಗಟ್ಟಲೆ ಮಗುವಿನ ಆರೈಕೆ ಮಾಡಿದಾಗ ಮಾತ್ರ ಮಗು ಬೆಳೆಯುತ್ತದೆ. ಹೀಗೆ ಬೆಳೆಸುವಾಗ ಆಕೆ ಕೆಲವೊಮ್ಮೆ ಸಿಡಿಮಿಡಿಗುಟ್ಟಬಹುದು, ಜರ್ಜರಿತಳಾಗಬಹುದು, ಕೂಗಾಡಬಹುದು ಆದರೂ ತನ್ನ ಮಮತೆಯನ್ನ ಬಿಟ್ಟುಕೊಡಳು. ಆದ್ದರಿಂದಲೇ ಆ ದೇವಾಧಿದೇವ ಮಹಾದೇವನು ಹೆಣ್ಣನ್ನು ಮಾತೃ ಸ್ವರೂಪಿ, ಜಗದಂಬೆ ಜಗನ್ಮಾತೆ ಎಂದು ಕರೆದನು. ಇಡೀ ಜಗತನು ಪ್ರೀತಿಸುವಷು ಮಮತೆಯ



ಕಡಲನ್ನು ತನ್ನಲ್ಲಿಟ್ಟು ಪೊರೆಯುತ್ತಾಳೆ ತಾಯಿ. ಮಮತೆಯ ಮಹಾವಾರಿಧಿ ಆಕೆ .

ಇನ್ನು ತಂದೆ ಮಕ್ಕಳ ಪ್ರೀತಿ ...ಕೆಲ ದಶಕಗಳ ಹಿಂದೆ ಕೂಡ ತಂದೆಮಕ್ಕಳ ಮಧ್ಯದಲ್ಲಿ ಅಷ್ಟೊಂದು ಹಾರ್ದಿಕವಾದ ಬಾಂಧವ್ಯ ಇರುತ್ತಿರಲಿಲ್ಲ. ಕಾರಣವಿಷ್ಟೆ, ಅಮ್ಮನ ರಕ್ಷೆ ಅಪ್ಪನ ಶಿಕ್ಷೆ ಎಂಬ ರೂಢಿಬದ್ಧ ನಿಯಮ. (ಬಹುಶಃ ಇಂದು ಅದು ತಿರುಗುಮುರುಗಾಗಿ ರಲೂಬಹುದು ). ಹಿಂದಿನ ಕಾಲದಲ್ಲಿ ಅಂದರೆ ಕೇವಲ ಐವತ್ತು-ಅರುವತ್ತು ವರ್ಷಗಳ ಹಿಂದೆ ತಿರುಗಿ ನೋಡಿದರೆ ಅಪ್ಪ ಮನೆಗೆ ಬಂದರೆ ಗಲಾಟೆ ಮಾಡುತ್ತಿದ್ದ ಎಲ್ಲಾ ಮಕ್ಕಳು ಗಪ್ ಚಿಪ್. ಪುಸ್ತಕ ಹಿಡಿದು ಓದಲು ಕೂತಿರುವ ಮಕ್ಕಳು, ತನ್ನ ಪಾಡಿಗೆ ತಾನು ಮನೆಕೆಲಸ ಮಾಡುತ್ತಿರುವ ಅಮ್ಮ ಮತ್ತು ಮನೆಯ ಇನ್ನಿತರ ಸದಸ್ಯರು, ಸೂಜಿಬಿದ್ದರೂ ಶಬ್ದ ಕೇಳಿಸೀತು ಎನ್ನುವಂತಹ ಮನೆಯ ವಾತಾವರಣ ಆ ಮನೆಯಲ್ಲಿ ತಂದೆಯ ಉಪಸ್ಥಿತಿಯನ್ನು ಸೂಚಿಸುತ್ತಿತ್ತು. ತಂದೆಯ ಕುರಿತು ಭಯ,ಗೌರವವೇ ಪ್ರೀತಿಯ ಇನ್ನೊಂದು ಮುಖದ ಭಾವವಾಗಿರುತ್ತಿತ್ತು. ಮಕ್ಕಳಿಗೆ ತಂದೆಯ ಬಳಿ ಏನನ್ನಾದರೂ ಕೇಳಬೇಕಾದರೆ ಅಮ್ಮನೇ ಮಧ್ಯವರ್ತಿ. ಅಮ್ಮನನ್ನೇ ಕಾಡಿ-ಬೇಡಿ ತಂದೆಯ ಬಳಿ ಕೆಲಸ ಗಿಟ್ಟಿಸಿಕೊಳ್ಳುತ್ತಿದ್ದದ್ದು. ಆದರೆ ಕೌಟುಂಬಿಕ ಮೌಲ್ಯಗಳು ಬದಲಾಗುತ್ತಿರುವ ಇಂದಿನ ಕಾಲದಲ್ಲಿ ತಂದೆ ಓರ್ವ ಸ್ನೇಹಿತನಂತೆ, ಮಾರ್ಗದರ್ಶಿಯಂತೆ ತೋರುತ್ತಿದ್ದಾರೆ ಎಂಬುದು ಕೂಡ ಅತ್ಯಂತ ಸ್ವಾಗತಾರ್ಹ. ಈಗ ಅಮ್ಮನ ಬಳಿ ಹೇಳಿಕೊಳ್ಳದ ಹಲ ಕೆಲವು ವಿಷಯಗಳನ್ನು ಮಕ್ಕಳು ತಂದೆಯ ಬಳಿ ನಿಸ್ಸಂಕೋಚವಾಗಿ, ಸರಾಗವಾಗಿ ಹೇಳಿಕೊಳ್ಳಬಲ್ಲರು, ವಾದಿಸಬಲ್ಲರು. ಅಪ್ಪಂದಿರೂ ಅಷ್ಟೇ.. ಮುಂಚಿನ ಅಪ್ಪಂದಿರಂತೆ ಅಲ್ಲದೆ ತಮ್ಮ ಮಕ್ಕಳ ಜೊತೆ ಸಹಜವಾಗಿ, ಅಷ್ಟೇ ಸರಾಗವಾಗಿ ಬೆರೆತು ಅವರ ಇಷ್ಟಾನಿಷ್ಟಗಳಿಗೆ ಕಿವಿಯಾಗುತ್ತಾರೆ, ಅವರ ಬೇಕು ಬೇಡಗಳಿಗೆ ,ಅವರ ಒಳಿತು ಕೆಡುಕುಗಳಿಗೆ ಕಣ್ಣಾಗುತ್ತಾರೆ ಅವರ ತಪ್ಪು ಸರಿಗಳನ್ನು ನಿಷ್ಠುರತೆ ಎಂಬ ತಕ್ಕಡಿಯಲ್ಲಿ ತೂಗದೆ ನಿಧಾನವಾಗಿ ಪರಾಮರ್ಶೆ ಮಾಡಿ ಸಮಾಧಾನವಾಗಿ ತಿಳಿ ಹೇಳುವ ತಾಳ್ಮೆಯ ದ್ರಷ್ಟಾರರಾಗಿದ್ದಾರೆ.. ಅಂತೆಯೇ ಇಂದು ಅಪ್ಪಂದಿರನ್ನು ಎರಡನೇ ತಾಯಿ ಎಂದೆನುವ ಕಾಲ ಬಂದಿದೆ. ಇದು ಕೂಡ ಪ್ರೀತಿಯ ಬದಲಾದ ರೂಪ.

ಇನ್ನು ಮಗುವಾಗಿ ತನ್ನ ಶೈಶವಾವಸ್ಥೆಯನ್ನ ಪೂರೈಸಿ, ಹದಿಹರೆಯಕ್ಕೆ ಕಾಲಿಟ್ಟಾಗ ಕೂಡ ತಂದೆ ಅವರಿಗೆ ಒಳ್ಳೆಯ ಸ್ನೇಹಿತನಾಗುತ್ತಾನೆ, ಹೆಣ್ಣುಮಕ್ಕಳಿಗಂತೂ ಅವರಪ್ಪ ಅವರ ಮೊದಲ ಪ್ರೀತಿ, ಮೊದಲ ಹೀರೋ, ಮೊದಲ ದೈವ. ಈ ವಿಷಯದಲ್ಲಿ ಕೊಂಚ ಗಂಡು ಮಕ್ಕಳು ತಾಯಿಯ ಸೆರಗು ಹಿಡಿಯುವುದೇ ಹೆಚ್ಚು , ತಂದೆಯ ಬಳಿ ಗಂಡು ಮಕ್ಕಳು ತಮ್ಮ ಹದಿಹರೆಯದಲ್ಲಿ ಕೊಂಚ ಬಿಗುವಾನದಿಂದ ಇರುವುದು ಕೂಡ ಕಂಡುಬರುತ್ತದೆ. ಇಲ್ಲಿ ಪ್ರೀತಿ ಬಿಗುಮಾನದ ರೂಪದಲ್ಲಿ ವ್ಯಕ್ತವಾಗುತ್ತದೆ. ಇನ್ನು ಶಾಲೆಗಳಲ್ಲಿ ಮಕ್ಕಳು ತಮ್ಮ ಶಾಲೆಯನ್ನು, ಸಹಪಾಠಿಯನ್ನು, ಶಿಕ್ಷಕರನ್ನು ಆತ್ಮೀಯವಾಗಿ ಹಚ್ಚಿಕೊಳ್ಳುತ್ತಾರೆ. ಬೇಕಾದರೆ ಯಾರನ್ನಾದರೂ ಕೇಳಿ ನೋಡಿ, 'ನಿಮ್ಮ ಅತ್ಯಂತ ನೆಚ್ಚಿನ ಗುರುಗಳು, ಮೆಚ್ಚಿನ ಸ್ನೇಹಿತರು ಯಾರು'?? ಎಂದು ಕೇಳಿದರೆ ಸಿಗುವ ಉತ್ತರ ಅವರ ಪ್ರಾಥಮಿಕ ಶಾಲೆಯ ಶಿಕ್ಷಕರೇ! .ಕಾರಣ ಅತ್ಯಂತ ಸರಳ ಹಾಗೂ ಸ್ಪಷ್ಟ. ಮೊತ್ತ ಮೊದಲು ಮನೆಯ ಚೌಕಟ್ಟನ್ನು ದಾಟಿ ಮಗು ಹೊರ ಬಂದಾಗ ಅದಕ್ಕೆ ಸಿಗುವ ಪರಿಸರವೇ ಶಾಲೆ. ಅಲ್ಲಿ ಮೌಲ್ಯಗಳನ್ನು ಕಥೆಯ ಮೂಲಕ, ಹಾಡಿನ ಮೂಲಕ, ಪಾಠದ ಮೂಲಕ ಹೇಳಿಕೊಡುವ, ಮಗುವನ್ನು ಒಬ್ಬ ಉತ್ತಮ ಪ್ರಜೆಯನ್ನಾಗಿಸುವ ಕಾಯಕ ಮಾಡುವ ಶಿಕ್ಷಕ ಮಕ್ಕಳಿಗೆ ಅತ್ಯಂತ ಪ್ರೀತಿಪಾತ್ರನಾಗುತ್ತಾನೆ. ತಿದ್ದಿ, ತೀಡಿ,ಮುದ್ದು ಮಾಡಿ ಶಿಕ್ಷೆ ನೀಡಿ ಹೇಗಾದರೂ ಹೇಳಲಿ, ಶಿಕ್ಷಕ ಮಗುವಿನ ಮೊತ್ತ ಮೊದಲ ಕುಟುಂಬದ ಹೊರಗಿನ ಪ್ರೀತಿ. ಜೆಣಟಿಜಜಜಿಟಿಜಜತೆಗೆ ಸಹಪಾಠಿಗಳು ಮಗುವಿಗೆ ಅತ್ಯಂತ ಆತ್ಮೀಯರಾಗುತ್ತಾರೆ. ಇಲ್ಲಿಯೂ ಕೂಡ ಮಗು ಹೊಸದಾದ, ಸುರಕ್ಷಿತವಾದ



ಸುಮಧುರ ಸಂಬಂಧವನ್ನ, ಮನೆಯ ಹೊರಗೆ ಕಂಡುಕೊಳ್ಳಲು ತನ್ನದೇ ವಯಸ್ಸಿನ ಸ್ನೇಹಿತರನ್ನು ಹೊಂದುವುದು ಗೆಳೆತನವನ್ನು ನಿಭಾಯಿಸುವುದು ಪ್ರೀತಿಯ ಮತ್ತೊಂದು ರೂಪ.

ಪ್ರೌಢ ಮತ್ತು ಹದಿಹರೆಯದ ಅವಸ್ಥೆಯಲ್ಲಿ, ಕಾಲೇಜು ಸಮಯದಲ್ಲಿ ಮಕ್ಕಳು ಪರಸ್ಪರ ವಿರುದ್ಧ ಲಿಂಗಿಗಳ ಆಕರ್ಷಣೆ ಹೊಂದುವುದು ಸಹಜವಾದದ್ದು. ಆದರೆ ಇದು ಅಪೇಕ್ಷಣೀಯವಲ್ಲ ಎಂಬುದು ಸಾಮಾಜಿಕ ತಿಳುವಳಿಕೆ. ಆದರೆ ಈ ಪ್ರೀತಿ ಎಂಬುದು ಮಾಯೆ ಎಂಬುದು ಸ್ಪಷ್ಟವಾಗುವುದು. ಈ ಹದಿಹರೆಯದಲ್ಲಿಯೇ. ಅರಿಯದ ವಯಸ್ಸು, ಕೇಳದ ಮನಸ್ಸು ಮಗುವನ್ನು ಪ್ರೀತಿಯ ಬಲೆಗೆ ದೂಡಬಹುದು.. ಹಾಗೆಂದು ಆ ಪ್ರೀತಿಯ ಆಯಸ್ಸು ತುಂಬ ಕಡಿಮೆ. ಅರಿವಿನ ಕೊರತೆ, ವಯೋ ಸಹಜ ಆಕರ್ಷಣೆಗಳಿಗೆ ಹಲವರು ತುತ್ತಾಗಬಹುದು, ಮುಂದೆ ಅದೊಂದು ಮಧುರಾನುಭೂತಿ ಯಾಗಿ ಜೀವನಪೂರ್ತಿ ಅವರನ್ನು ಕಾಡಬಲ್ಲದು.. ಆದರೆ ಅದನ್ನು ಕೇವಲ ಆಕರ್ಷಣೆ ಎಂದಲ್ಲದೆ ಪ್ರೀತಿ ಎಂದು ಹೇಳಲಾಗುವುದಿಲ್ಲ. ಕೆಲವೊಮ್ಮೆ ಈ ಆಕರ್ಷಣೆಯ ಮೂಲಕವೇ ಆರಂಭವಾದ ಪ್ರೀತಿ ಗಟ್ಟಿಯಾಗಿ ಹೆಮ್ಮರವಾಗಿ ಮನೆಯವರೆಲ್ಲರನ್ನು ಒಪ್ಪಿಸಿ ಅಥವಾ ಒಪ್ಪಿಸಲು ಸಾಧ್ಯವಾಗದೆ ಇದ್ದಾಗಲೂ ಕೂಡ ಮದುವೆ ಎಂಬ ಬಂಧನದಲ್ಲಿ ಒಂದಾಗುವುದು ಪ್ರೀತಿಯ ಇನ್ನೊಂದು ಗಟ್ಟಿತನದ ರೂಪ.

ಮುಂದೆ ಬರುವ ಘಟ್ಟವೇ ಮನುಷ್ಯನ ಜೀವನದ ಅತ್ಯಂತ ಪ್ರಮುಖ ಘಟ್ಟ. ಒಂದು ಹಂತದ ವಿದ್ಯಾಭ್ಯಾಸ ಮುಗಿಸಿ ಸಂಪಾದನೆಯ ದಾರಿಯನ್ನು ಹಿಡಿದ ಮಕ್ಕಳಿಗೆ ಮದುವೆ ಎಂಬ ಸುಮಧುರ ಸಾಂಸಾರಿಕ ಬಂಧಕ್ಕೆ, ಸಾಮಾಜಿಕ ಬದ್ಧತೆಗೆ ತೊಡಗಿಸುವುದು. ಇಲ್ಲಿ ಗಂಡು-ಹೆಣ್ಣು ಪರಸ್ಪರ ಅವಲಂಬನೆ, ಸಹಬಾಳ್ವೆ, ಹೊಂದಾಣಿಕೆ, ಪ್ರೀತಿ- ವಿಶ್ವಾಸಗಳ ಬಂಧನದಲ್ಲಿ ಒಂದಾಗುತ್ತಾರೆ. ನಮ್ಮ ಭಾರತೀಯ ಪರಂಪರೆಯಲ್ಲಂತೂ ವಿವಾಹವೆ0ಬುದು ಶ್ರೇಷ್ಠ ವಿಧಿ. ಮದುವೆಗಳು ಸ್ವರ್ಗದಲ್ಲಿಯೇ ನಿಶ್ಚಯವಾಗಿರುತ್ತದೆ ಎಂಬುದು ಪ್ರಪಂಚದ ಸಾರ್ವಕಾಲಿಕ ಹೇಳಿಕೆ. ಹಾಗೆಯೇ ವಿವಾಹ ಎಂಬುದು ಗಂಡು ಹೆಣ್ಣುಗಳಿಗೆ ಸಾಮಾಜಿಕ ಬಂಧನವನ್ನು, ಚೌಕಟ್ಟನ್ನು, ತನ್ಮೂಲಕ ಪ್ರೀತಿಯ ಮತ್ತೊಂದು ದರ್ಶನವನ್ನು ಮಾಡಿಸುತ್ತದೆ. ಇಲ್ಲಿ ಪ್ರೀತಿಯ ಪರಾಕಾಷ್ಠೆಯನ್ನೇ ಪ್ರೇಮ ಎಂದು ಕರೆಯಬಹುದು . ನಿಷ್ಕಾಮ ಪ್ರೇಮ ಎಂಬ ಮಾತೊ0ದು ಅಲ್ಲಲ್ಲಿ ಕೇಳಬರುತ್ತದೆ. ಹಾಗಾದರೆ ನಿಷ್ಕಾಮ ಪ್ರೇಮ ಎಂದರೆ ಏನು? ಹಲವರು ಹೇಳುವಂತೆ ಹಲವಾರು ವ್ಯಾಖ್ಯಾನಗಳು ಪ್ರೇಮಕ್ಕೆ ಇದ್ದರೂ ಅಂತಿಮವಾಗಿ ಪ್ರೇಮ ಎಂಬುದು....ತನ್ನ ಜೊತೆಗಿನ ವ್ಯಕ್ತಿಯ ಎಲ್ಲಾ ಒಳಿತು - ಕೆಡುಕು, ಸರಿ -ತಪ್ಪುಗಳನ್ನು ಒಳಗೊಂಡಂತೆಯೇ ನೀವು ಒಬ್ಬ ವ್ಯಕ್ತಿಯನ್ನು ಪ್ರೀತಿಸುವುದಾದರೆ ಅದು ನಿಷ್ಕಾಮ ಪ್ರೇಮ . ಅಲ್ಲಿ ಯಾವುದೇ ರೀತಿಯ ನಿರೀಕ್ಷೆಗಳು, ಭರವಸೆಗಳು ಸಲ್ಲದು. ನೀ ನನಗಿದ್ದರೆ ನಾ ನಿನಗೆ ಎಂಬ ವ್ಯಾವಹಾರಿಕ ಭಾವ ವರ್ಜ್ಯ. ಅಂತೆಯೇ ರಾಧಾ ಕೃಷ್ಣರ ಪ್ರೀತಿ ಇಂದಿಗೂ ಜಗಜ್ಜನಿತ. ಅವರ ಪ್ರೀತಿ ನಿಷ್ಕಾಮವಾದುದು.





ಯಾವತ್ತೂ ಪ್ರೇಮವನ್ನೇ ಬಯಸಿದ್ದ ಆಂತರಂಗಿಕ ಗೆಳೆತನ. ಅಲ್ಲಿ ಕಾಮನೆಗಳಿಗೆ ಅವಕಾಶವಿರಲಿಲ್ಲ. ಒಂದು ರೀತಿಯ ಪ್ಲೇಟಾನಿಕ್ ಎಂದು ಇಂಗ್ಲಿಷಿನಲ್ಲಿ ಬಳಸಬಹುದಾದ ರೀತಿಯ ನವಿರು ಪ್ರೇಮ. ಪ್ರೀತಿಯ ಇಂಥ ಉತ್ಕಟ ರೂಪವೇ ಪ್ರೇಮ. ತನ್ನ ಪ್ರೀತಿ ತನ್ನ ಜೊತೆಗೆ ಜೀವಿತದ ಕೊನೆಯವರೆಗೆ ಇರಬೇಕೆಂಬ ಸ್ವಾರ್ಥ ಕೂಡ ರಾಧಾ-ಕೃಷ್ಣರಲ್ಲಿ ಇರಲಿಲ್ಲ. ಪರಸ್ಪರ ಏಳಿಗೆಗಾಗಿ ತಮ್ಮ ಪ್ರೀತಿಯನ್ನು ಬಿಟ್ಟುಕೊಟ್ಟ ತನ್ಮೂಲಕ ಅಮರ ಪ್ರೇಮಿಗಳಾದವರು ರಾಧಾ-ಕೃಷ್ಣರು. ಅವರು ಪತಿ ಪತ್ನಿಯರಲ್ಲ...ಆದರೆ ದಾಂಪತ್ಯವನು ಮೀರಿದ ಸಾಂಗತ್ಯ ಅವರಿಬ್ಬರದಾಗಿದ್ದರಿಂದಲೇ ಅವರು ಇಂದಿಗೂ ಪೂಜನೀಯರು.

ಹದಿಹರೆಯದ ಕಾವಿನಲ್ಲಿ ಯಾವುದೋ ಆಕರ್ಷಣೆಗೆ ಒಳಪಟ್ಟು ಒಬ್ಬರನ್ನು ಪ್ರೀತಿಸಿ, ಆ ಪ್ರೀತಿಯನ್ನು ಇನ್ನೊಬ್ಬರು ತಿರಸ್ಕರಿಸಿ ದಾಗ ಅವರ ಮೇಲೆ ದೈಹಿಕ ಹಲ್ಲೆಗಳು, ಎಸಿಡ್ ದಾಳಿಯ0ತಹ ಕ್ಷುಲ್ಲಕ, ಅಮಾನವೀಯ ಘಟನೆಗಳಿಗೆ ತಮ್ಮನ್ನು ತಾವು ಒಡ್ಡಿಕೊಳ್ಳುವ ಹದಿಹರೆಯದವರು ಪ್ರೇಮದ ಪೂಜಾರಿಗಳಲ್ಲ.. ಬದಲಾಗಿ ಪ್ರೇಮದ ಪಾತಕಿಗಳು. ಪ್ರೇಮ ತ್ಯಾಗವನ್ನು ಕೂಡ ಬಯಸುತ್ತದೆ ಎಂಬ ಕನಿಷ್ಠ ಸತ್ಯವನ್ನು ಅರಿಯದ ಕ್ಷುದ್ರ ಜೀವಿಗಳು. ತಾನು ಪ್ರೀತಿಸುವ ವ್ಯಕ್ತಿ ಎಲ್ಲೇ ಇರಲಿ ಹೇಗೆ ಇರಲಿ, ಸುಖವಾಗಿ ಇರಲಿ ಎಂಬುದು ನೈಜ ಪ್ರೀತಿಯ ಲಕ್ಷಣ. ಮುಂದೆ ಮಕ್ಕಳು, ಮರಿ, ಮನೆ ಕೆಲಸ, ಉದ್ಯೋಗ, ಸಾಂಸಾರಿಕ ಜೀವನ, ಕೌಟುಂಬಿಕ ಜವಾಬ್ದಾರಿಗಳು ಒಂದು ಹಂತಕ್ಕೆ ಬಂದಾಗ ಪತಿ-ಪತ್ನಿಯರ ಮಧ್ಯದಲ್ಲಿರುವ ಹಲವಾರು ಭಿನ್ನಾಭಿಪ್ರಾಯಗಳು, ವಯೋ ಸಹಜ ಹರೆಯದ ಆಸೆ-ಆಕಾಂಕ್ಷೆಗಳು, ಕಾಮನೆಗಳು, ಸಿಟ್ಟು-ಸೆಡವುಗಳು, ಕಾರಣವೇ ಇಲ್ಲದೆ ಕಿರಿಕಿರಿಗಳು, ಪರಸ್ಪರರ ಅವಶ್ಯಕತೆಯ, ಸಮಯ ಬೇಡುವ ಒಂದು ರೀತಿಯ ಪೊಸೆಸ್ಸಿವ್ ನೆಸ್ ಕಡಿಮೆಯಾಗಿ ಮಾಗಿದ ಪ್ರೇಮ ದಂಪತಿಗಳದಾಗುತ್ತದೆ. ಪರಸ್ಪರಾವಲಂಬನೆ, ಪ್ರೇಮದ ಬಂಧನ, ಕುಟುಂಬದ ಜವಾಬ್ದಾರಿಗಳು ಅವರನ್ನು ಇನ್ನಷ್ಟು, ಮತ್ತಷ್ಟು ಹತ್ತಿರಕ್ಕೆ ತರುತ್ತದೆ. ಹರೆಯದಲ್ಲಿ ಸಂಗಾತಿ ದೈಹಿಕವಾಗಿ ಹತ್ತಿರವಾದರೆ, ವಯಸ್ಸಾದಂತೆ ಮಾನಸಿಕವಾಗಿ, ಭಾವನಾತ್ಮಕವಾಗಿ ಪರಸ್ಪರ ಇನ್ನಷ್ಟು ಆಪ್ತರಾಗುತ್ತಾರೆ. ಮುಪ್ಪಾದಂತೆ ಪರಸ್ಪರ ಅವಲಂಬನೆ ಒಂದೇ ದೇಹ ಎರಡು ಜೀವ, ಏಕ ಭಾವ ಎಂಬಂತೆ ಆಗುತ್ತಾರೆ ಆಗಬೇಕು ಕೂಡ. ಆದರೆ ಎಲ್ಲರಿಗೂ ಈ ಪ್ರೇಮ ಮರೀಚಿಕೆಯೇ ಸರಿ. ಕೆಲವರಿಗೆ ದಾಂಪತ್ಯದಲ್ಲಿ ಪ್ರೇಮ ಸಿಗದೇ ಹೋದಾಗ ವಿರಸ , ನೋವು ನಿರಾಶೆ ಸಹಜ. ಇನ್ನು ಪರಸ್ಪರ ಹೊಂದಾಣಿಕೆ ಸಾಧ್ಯವೇ ಇಲ್ಲ ಎಂಬಂತಹ ಪರಿಸ್ಥಿತಿಯಲ್ಲಿಯೂ ಕೂಡ ನಮ್ಮ ಹಿಂದಿನ ಜನರು ಕೌಟುಂಬಿಕ ಚೌಕಟ್ಟಿನಲ್ಲಿ ತಮ್ಮ ಜೀವನವನ್ನು ಸವೆಸಿಬಿಡುತ್ತಿದ್ದರು ಕೂಡ. ಕೌಟುಂಬಿಕ ಜೀವನಕ್ಕಿರುವ, ಸಾಮಾಜಿಕ ಬದುಕಿಗಿರುವ ತಾಕತ್ತು ಕೂಡ ಅದೇ ಕೌಟುಂಬಿಕ ಪ್ರೀತಿ. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ, ಹೊಂದಾಣಿಕೆಯ ಬದುಕು ಸಾಧ್ಯವಾಗದೇ ಹೋದಾಗ ಪರಸ್ಪರ ಗೌರವಪೂರ್ವಕವಾಗಿ ವಿಚ್ಛೇದನ ಹೊಂದಿ ತಮ್ಮ ಪಾಡಿಗೆ ತಾವು ಜೀವನ ಸಾಗಿಸುತ್ತಾರೆ. ಇದು ಕೂಡ ಆತ್ಮಗೌರವದ, ಸ್ವಯಂ ಪ್ರೀತಿಯ ಲಕ್ಷಣ, ಬದಲಾಗುತ್ತಿರುವ ಕಾಲಮಾನದಲ್ಲಿ ಬೇಕಿದ್ದರೆ ಬೆರೆತು ನಡೆ, ಬೇಡವಾದರೆ ಸರಿದು ನಡೆ ಎಂಬ ಈ ನಡೆ ಅಪೇಕ್ಷಣೀಯವಲ್ಲದೇ ಹೋದರೂ ಆಕ್ಷೇಪಣೀಯವಂತೂ ಅಲ್ಲ .

ಕಾಲಾಯ ತಸ್ಮೈ ನಮಃ.

ಈ ಎಲ್ಲದರ ಮಧ್ಯದಲ್ಲಿ ನಾವು ಹುಟ್ಟಿನಿಂದ ಸಾವಿನವರೆಗೂ ಇನ್ನೊಂದು ಜೀವವನ್ನು ಪ್ರೀತಿಸುತ್ತೇವೆ, ಆರಾಧಿಸುತ್ತೇವೆ, ಪೂಜಿಸುತ್ತೇವೆ ನಂಬುತ್ತೇವೆ.. ನಂಬಿ ನಡೆಯುತ್ತೇವೆ. ಅದುವೇ ದೈವ, ಅದುವೇ ದೇವರು. ಚಿಕ್ಕಂದಿನಲ್ಲಿ ಕೇಳಿದ್ದನ್ನೆಲ್ಲಾ ಕೊಡುವವನು ದೇವರಾದರೆ, ತಪ್ಪು ಮಾಡದಂತೆ ತಡೆಯಲು ಕಾರಣವಾಗಿರುವವನು ದೇವರಾದರೆ, ಪರೀಕ್ಷೆಯಲ್ಲಿ ಪಾಸಾಗಲು ಸಹಾಯ ಮಾಡುವವರು ದೇವರಾದರೆ ಮುಂದೆ ವಯಸ್ಸಾದಂತೆ ದೇವರು ಭಾವ – ಭಕ್ತಿ ಯ ಅವ್ಯಕ್ತ ರೂಪವಾಗಿ ಹೊರಹೊಮ್ಮುತ್ತಾನೆ. ವ್ಯಕ್ತಿಯ ಮಾನಸಿಕ, ಭಾವನಾತ್ಮಕ ಪ್ರಪಂಚದ ಇನ್ನೊಂದು ಭಾಗವಾಗಿ ದೈವ ಭಕ್ತಿ ಆತನ ಪ್ರಪಂಚವನ್ನು ಆಳುತ್ತದೆ. ಇದು ಕೂಡ ಪ್ರೀತಿಯ ಇನ್ನೊಂದು ಮುಖವೇ. ಪ್ರಾಕೃತಿಕ ಅವಘಡಗಳಾದ ಭೂಕಂಪ, ಸುನಾಮಿ, ಹಿಮಪಾತ, ಭೂಕುಸಿತಗಳಂತಹ ಸಂದರ್ಭಗಳಲ್ಲಿ ಜಾತಿ,ಮತ, ಕುಲ ಧರ್ಮಗಳ ಹಂಗಿಲ್ಲದೆ ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನ ಉಳಿವಿಗಾಗಿ ಹೋರಾಡುತ್ತಾನೆ, ಇದ್ದುದನ್ನು ಹಂಚಿಕೊಳ್ಳುತ್ತಾನೆ, ತನಗಿಲ್ಲದಿದ್ದರೂ ತನ್ನವರಿಗಾಗಿ ಆಹಾರ, ಬಟ್ಟೆ, ವಸತಿ ವ್ಯವಸ್ಥೆ ಮಾಡುತ್ತಾನೆ... ಅದುವೇ ನಿಜವಾದ ಜಗದ ರೀತಿ. 'ಬಾಳು, ಬಾಳಗೊಡು' ಎಂಬ ಧ್ಯೇಯದಂತೆ ನಡೆಯುತ್ತಾನೆ ಅದೇ ನಿಜವಾದ ಮಾನವ ಪ್ರೀತಿ. ಹೀಗೆ ಪ್ರೀತಿಗೆ ಹಲವಾರು ಮುಖಗಳು, ಹಲವಾರು ಆಯಾಮಗಳು. ಆದರೂ ಕೂಡಾ ಮತ್ತೊಮ್ಮೆ ಮಗದೊಮ್ಮೆ ವಿಶ್ವಮಾನವ ಕುವೆಂಪು ಅವರ ಹೇಳಿಕೆಯಂತೆ ವಿಶ್ವ ಪ್ರೇಮಿಯಾಗಿ, ವಿಶ್ವಭ್ರಾತೃತ್ವವನ್ನು ಸಾರೋಣ, ವಿಶ್ವ ಮಾನವರಾಗೋಣ, ಮನುಜ ಮತವೇ ವಿಶ್ವಪಥ ಎಂಬ ಹಾದಿಯಲ್ಲಿ ಸಾಗುವ ಪಥಿಕರಾಗೋಣ ಎಂಬ ಆಶಯದೊಂದಿಗೆ..

# ಮಾನವ ಹಕ್ಕು-ಪೋಕ್ಸೋ ಕುರಿತು ಕಾನೂನು ಅರಿವು



**ಉದಯರಶ್ಮಿ ನ್ಯೂಸ್**ವಿಜಯಪುರ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವಿಜಯಪುರ ಹಾಗೂ ಪೊಲೀಸ್ ಇಲಾಖೆ ಇವರ ಸಹಯೋಗದಲ್ಲಿ ವಿಜಯಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಇಟ್ಟಂಗಿಹಾಳ ಗ್ರಾಮದ ತುಂಗಳ ಪಿಯು ಕಾಲೇಜ್‌ನಲ್ಲಿ ಡಿ.16 ರಂದು ಮಾನವ ಹಕ್ಕುಗಳು ಮತ್ತು ಪೋಕ್ಸೊ ಕಾಯ್ದೆ ಕುರಿತು ಕಾನೂನು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಅರಿವು ಕಾರ್ಯಕ್ರಮದಲ್ಲಿ ಕಾಲೇಜಿನ 350 ವಿದ್ಯಾರ್ಥಿ-ವಿದ್ಯಾಥಿನಿಯರು ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ಪೊಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಹಾಗೂ ಸಂಚಾರಿ ನಿಯಮಗಳ ಬಗ್ಗೆ ಕಾನೂನಿನ ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂತೋಷ್ ಕುಂದರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವನೆ, ಪೊಲೀಸ್ ಉಪಾಧೀಕ್ಷಕ ಗಿರಿಮಲ್ಲಪ್ಪ ತಳಕಟ್ಟಿ, ಪೊಲೀಸ್ ನಿರೀಕ್ಷಕ ರಾಯಗೊಂಡ ಜಾನರ್, ಉಪನ್ಯಾಸಕರಾಗಿ ಪ್ಯಾನಲ್ ವಕೀಲರಾದ ಜಿ.ವಿ.ಖುದಾನಪೂರ ಮತ್ತು ಕಾಲೇಜ್ ಪ್ರಾಂಶುಪಾಲರು ಭಾಗವಹಿಸಿದ್ದರು.

# ಎಸ್ಡಿಎಂಸಿ ಅಧ್ಯಕ್ಷರಾಗಿ ಬಸನಗೌಡ ಆಯ್ಕೆ

**ಉದಯರಶ್ಮಿ ನ್ಯೂಸ್**

**ಬ್ರಹ್ಮದೇವನಮಡು** :ದೇವರಹಿಪ್ಪರಗಿ ತಾಲೂಕಿನ ಅಸಂತಾಪೂರ ಗ್ರಾಮದ ಸಕಾ9ರಿ ಹಿರಿಯ ಪ್ರಾಥ-ಮಿಕ ಶಾಲೆಯಲ್ಲಿ ಮಂಗಳವಾರ ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿ ನೂತನವಾಗಿ ರಚಿಸಲಾಯಿತು.



ನೂತನ ಅಧ್ಯಕ್ಷರಾಗಿ ಬಸನಗೌಡ ನಾಗರಡ್ಡಿ, ಉಪಾಧ್ಯಕ್ಷರಾಗಿ ಶಿವಪ್ಪ ಮೋಪಗಾರ, ಸದಸ್ಯರಾಗಿ ಶಂಕ್ರೆಪ್ಪ ಹರಿಜನ, ಗೋಲ್ಲಾಳಪ್ಪ ಹರಿ-ಜನ, ಅಮೀನಸಾಬ ನಾಯ್ಕೋಡಿ, ಖಾದರಸಾಬ ಉತ್ನಾಳ, ಅಲ್ಲಾಭಕ್ಷ ವಾಲಿಕಾರ, ಕಾಶಿಮಸಾಬ ಅರಬರ, ಮೈಬೂಬ ನಾಯ್ಕೋಡಿ, ಶರಣಪ್ಪ ಹರಿಜನ, ರಾಜು ಮನಿಯಾರ, ನಬಿಸಾಬ ನಾಯ್ಕೋಡಿ, ಮಹ್ಮದರಫೀಕ ಬ್ಯಾಲ್ಯಾಳ, ರಾಮನಗೌಡ ಬಿರಾದಾರ, ಸುರೇಶ ದೇಸಾಯಿ, ಬಸವರಾಜ ಸಜ್ಜನ, ಹಣಮಂತ್ರಾಯ ಪೂಜಾರಿ, ಗುರುಲಿಂಗಯ್ಯ ಹಿರೇಮಠ ಆಯ್ಕೆಯಾಗಿದ್ದಾರೆ ಎಂದು ಮುಖ್ಯಗುರು ಸಿ.ಬಿ.ಗಡಗಿ ತಿಳಿಸಿದ್ದಾರೆ.

ಸಭೆಯಲ್ಲಿ ಗ್ರಾಮದ ಪ್ರಮುಖರಾದ ಸುಭಾಸ ದೇಸಾಯಿ, ಹಣಮಂತ್ರಾಯಗೌಡ ಪಾಟೀಲ, ಮಡಿವಾಳಯ್ಯ ಮಠ, ನಬಿಸಾಬ ಹೂನಳ್ಳಿ, ಭೀಮನಗೌಡ ಬಿರಾದಾರ, ಗ್ರಾಪಂ ಸದಸ್ಯರಾದ ಗುತ್ತಪ್ಪಗೌಡ ನಾಗರಡ್ಡಿ, ದಾವಲಸಾಬ ವಾಲಿಕಾರ ಇದ್ದರು.

# ಹೊನವಾಡ: ಸಿದ್ದೇಶ್ವರ ಶ್ರೀಗಳಿಗೆ ಗುರು ನಮನ

**ಉದಯರಶ್ಮಿ ನ್ಯೂಸ್**

ಹೊನವಾಡ: ನುಡಿಯಿಂದ ಜನರನ್ನು ಸೆಳೆಯುವ ಜನಕ್ಕೆ ಈ ಲೋಕದಲ್ಲಿ ಕೊರತೆ ಇಲ್ಲ. ಆದ-ರೆ ಅದರ ಪರಿಣಾಮ ಕೇಳುಗನ ಆಳಕ್ಕಿಳಿಯುವುದಿಲ್ಲ ಎಂದು ಜ್ಞಾನಯೋಗಾಶ್ರಮದ ಶಂಕರಾನಂದ ಸ್ವಾಮೀಜಿ ಹೇಳಿದರು.




ತಿಕೋಟಾ ತಾಲ್ಲೂಕಿನ ಹೊನವಾಡ ಗ್ರಾಮದಲ್ಲಿ ನಡೆದ ಸಿದ್ದೇಶ್ವರ ಮಹಾಸ್ವಾಮಿಗಳ ಗುರು ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾವು ಕಂಡಂತಹ ಸದ್ಗುರು ಶ್ರೇಷ್ಠರಲ್ಲಿ ನಮ್ಮದೇ ಜಲ ನೆಲ ಕಪ್ಪು ಮಣ್ಣಿನಲ್ಲಿ ಜನಿಸಿ ಎಲ್ಲರ ಅಂತ:ಕರಣಕ್ಕೆ ಪಾತ್ರರಾದ ಗುರುಗಳಿವರು ಎಂದು ರೇ ಸಿ ಪಾಟೀಲ ನುಡಿದರು.

ಅರಳುವ ಪುಷ್ಪದಂತೆ ಇದ್ದು ಸುಗಂಧದಂತೆ ಜ್ಞಾನದ ಕಂಪನ್ನು ಹರವಿ ಬಾಡದೆ ಅಚ್ಚಳಿಯದೆ ಹೃದಯವಾಸಿ ಗುರುಗಳಿವರು. ಇವರನ್ನು ಹುಡುಕುವದಾದರೆ ತರು ಮರ ಲತೆಗಳಲ್ಲಿ ಪಕ್ಷಿ ಸಂಕುಲದಲ್ಲಿ ಜೀವಂತವಾಗಿದ್ದಾರೆ ಎಂದು ಬಾಬುರಾವ ಮಹಾರಾಜರು ಅಭಿಪ್ರಾಯಪಟ್ಟರು.

ಬುದ್ಧನಂತೆ ಭುವಿಗೆ ಬಂದವರು ಬಸವಣ್ಣನಂತೆ ದಾಸೋಹ ನೆರವೇ-ರಿಸಿದವರು ಅಲ್ಲಮ್ಮನಂತೆ ಜ್ಞಾನ ಬಿತ್ತಿದವರು ಸಂತ ಶ್ರೇಷ್ಠರನ್ನು ಕೊಂಡಾಡಿದವರು ಕವಿ ಸಾಹಿತಿಗಳನ್ನು ಹಾಡಿ ಹೊಗಳಿದವರು ಎಂದು ಅಡಾಳಟ್ಟಿಯ ಭೀಮಾಶಂಕರ ಶರಣರು ಹೇಳಿದರು.

ಕೃಷಿಗೆ ಮೈಯೊಡ್ಡಿದವರನ್ನು ಗೋಪಾಲರನ್ನು ಪ್ರಾಣಿ ಹಿಂಸೆ ಮಾಡದವರನ್ನ ಪ್ರೀತಿಸುವವರು ಇವರು ಈ ಶತಮಾನದ ಮಾತೃ ಪ್ರೇಮಿ ಸಂತರಿವರು ಎಂದು ಕಕಮ-ರಿಯ ಗುರುದೇವಾಶ್ರಮದ ಆತ್ಮಾರಾಮ ಸ್ವಾಮೀಜಿ ನುಡಿದರು.


ಉತ್ತಮ ಮಾರ್ಗದಲ್ಲಿ ನಡೆದು, ಅದನ್ನೇ ಹೃದಯದಲ್ಲಿ ತುಂಬಿಕೊಂಡ ನಂತರ, ತಮ್ಮ ಹೃದಯದಲ್ಲಿ ಮೂಡಿದ ಸದ್ಭಾವದ ಪಾಕವನ್ನೇ ಮಾತಿನಾನುಭೂತಿಯಲ್ಲಿ ಅಭಿವ್ಯಕ್ತಿಸುವ ನಡೆಯೇ ಮಹಾತ್ಮರ ಹಾದಿ ಎಂದವರು ಕಕಮರಿಯ ಗಂಗಣ್ಣ ಮಹಾರಾಜರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ ತುಕಾರಾಮ ದಡಕೆ, ಗೌರಿಶಂಕರ ಹಿರೇಮಠ, ಸುರೇಶಗೌಡ ಚಾವರ, ಲಿಂಗರಾಜ ಪಾಟೀಲ, ಆನಂದ ಕೊರಬು, ಮಹಾದೇವ ಜಾಧವ, ಅರವಿಂದ ಮಾಲಗಾರ, ಶಂಕರ ಪಡತಾರೆ, ಹಣಮಂತ ಗುಗ್ಗರಿ, ದಾನೇಶ ಐನಾಪುರ, ಹಣಮಂತ ಶಿಂದೆ, ಶಿವಾಜಿ ಜಾಧವ, ರಮೇಶ ಗಾಯಕವಾಡ ಮತ್ತು ಗ್ರಾಮಸ್ಥರು ಇದ್ದರು.

ಅಪ್ಪು ಭಜಂತ್ರಿ ಶಿಕ್ಷಕರು ಪ್ರಾಥ-ರ್ನೆ ಗೀತೆಯನ್ನು ಹಾಡಿದರು.ಆರ್ ಎಂ ಸಕ್ರಿ ನಿರೂಪಿಸಿದರು ಧರೆಪ್ಪ ಸಿದ್ನಾಥ ಸ್ವಾಗತಿಸಿದರು ನಿಂಗಪ್ಪ ಕೋಟಿ ವಂದಿಸಿದರು.

## ಕಾವ್ಯರಶ್ಮಿ

– ಅಂಜಲಿ ತೊರವಿ
("ನಮ್ಮ ಕಥಾ ಅರಮನೆ" ಬರಹಗಾರರು)



### ಹಸಿದ ಒಡಲು

ಹಸಿದ ಒಡಲು ಬೆಸೆದ ನಂಟು
ಕುಸಿದ ಹುಸಿಯ ಭರವಸೆ
ಎಸೆವ ನೋಟ ದಿನದ ಪಾಠ
ಕಸಿದ ಕರುಣೆ ದುರ್ದೆಸೆ

ಬುಟ್ಟಿ ತುಂಬ ತುಂಬಿಕೊಂಡ
ದಿಟ್ಟ ದೇವ ಮೂರುತಿ
ಪುಟ್ಟ ನಗುವ ಮಗುವ ಜೊತೆಗೆ
ಕಟ್ಟಿ ನೋವ ಜೊತೆಜೊತಿ

ನೋವ ಮರೆತು ನಗುವ ಮೊಗದಿ
ಭಾವ ಬೆಸೆದ ಬಂಧದೆ
ಕಾವು ಹತ್ತಿ ಹಸಿದ ಹೊಟ್ಟೆ
ಸೇವೆಗಾಗಿ ಕರೆದಿದೆ



ನಗುವ ಮೊಗದಿ ಜಗದ ಸುಖವು
ಬಗೆದು ಬಳಿಗೆ ಬಂದಿದೆ
ಸಿಗದ ಸುಖವನರಸಿಕೊಂಡು
ಜಗವ ಸುತ್ತ ಹೊರಟಿದೆ.

ದಿನದ ಬದುಕು ಹರಕು ಮುರಕು
ಕನಸು ನನಸು ಎಂದಿಗೆ
ಮನದ ತುಂಬ ಬಯಕೆ ತುಂಬಿ
ಮುನಿದ ಹರುಷದೊಂದಿಗೆ.

# ಗೃಹಿಣಿಯರಲ್ಲಿ ಪೋಷಕಾಂಶದ ಕೊರತೆ

ಪಂಚ ಭೂತಗಳಿಂದಾದ ಭೂಮಿಯು ತನ್ನೊಳಗೆ ಅಡಗಿಸಿಟ್ಟುಕೊಂಡ ಎಷ್ಟೊ ಕೋಟಿ ಕೋಟಿ ಪ್ರಕೃತಿ ಸೌಂದರ್ಯದ ಅಂಶಗಳನ್ನು ಮಾನವನು ತನ್ನ ಜೀವನೋಪಾಯದ ನಿತ್ಯ ಬೇಡಿಕೆಯ ಉಪಯೋಗಕ್ಕಾಗಿ ತೆಗೆದು ಬಳಸಿಕೊಳ್ತಿದಾನೆ.

ಬದುಕಿನ ಅಂಶಕ್ಕೆ ಎಲ್ಲವನ್ನೂ ಬೇಕೆಂದು.

ಇದರೊಟ್ಟಿಗೆ ಬದುಕುವುದಕ್ಕೂ ಬೇಕಾದ ಆರೋಗ್ಯದ ರಕ್ಷಣೆಯಲ್ಲೂ ಜೀವಾಂಶಗಳ ಕೊರತೆ ನೀಗಿಸಲು ಆಹಾರದಿಂದ ಪೋಷಕಾಂಶಗಳು ಪಡೆಯುತ್ತಿದ್ದಾನೆ.



## ಭಾವರಶ್ಮಿ


– ರೇಖಾ
("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಆದ್ದರಿಂದ ಆರೋಗ್ಯಕರ ಸಮಾಜದ ನಿರ್ಮಾಣಕೆ ಕುಟುಂಬವೆಂಬ ಅಂಶ ಚೆನ್ನಾಗಿರ್ಬೇಕು. ಈ ಕುಟುಂಬವೆಂಬುದು ಸರಿಯಾದ ದಾರಿಯಲ್ಲಿ ನಿರ್ವಹಿಸಲು ಮಹಿಳೆಯೊಬ್ಬಳಿಗೇ ಸಾಧ್ಯ.

ಅದಕ್ಕಾಗಿ ತನ್ನ ಕುಟುಂಬದ ನಿರ್ವಹಣೆಗಾಗಿ ರಕ್ಷಣೆ ಮತ್ತು ಪೋಷಣೆಗಾಗಿ ಆರೋಗ್ಯಯುಕ್ತ ಪೋಷಕಾಂಶಗಳನ್ನು ಸೇವಿಸಬೇಕಾಗುತ್ತದೆ.

ಗೃಹಿಣಿಯರು ತುಂಬಾ ಪ್ರತಿಭಾನ್ವಿತ ಜಾದುಗಾರರು . ಯಾಕೆಂದರೆ ಅವರು



ಪ್ರತಿದಿನ ಕೆಲಸ, ಮನೆ, ಮಕ್ಕಳು, ಕುಟುಂಬ, ಮನೆಗೆಲಸ ಮತ್ತು ಇತರ ಕಾರ್ಯಗಳ ನಡುವೆ ತಮ್ಮ ಸಮಯವನ್ನು ಹೊಂದಿಸಿಕೊಳ್ಳುತ್ತಾರೆ. ಆದಾಗ್ಯೂ ಈ ಎಲ್ಲಾ ಬಹು-ಕಾರ್ಯಗಳು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು. ಪುರುಷ-ರಿಗಿಂತ ಮಹಿಳೆಯರು ಸಾಮಾನ್ಯವಾಗಿ ಕೆಲವು ಪೋಷಕಾಂಶಗಳ ಕೊರತೆಗೆ ಹೆಚ್ಚು ಒಳಗಾಗುತ್ತಾರೆ ಎಂದು ಅನೇಕ ಅಧ್ಯಯನಗಳು ಸೂಚಿಸಿವೆ.

ಗೃಹಕಾರ್ಯ ಮತ್ತು ಇತರ ಮನೆಕೆಲಸಗಳು ಯಾವುದೇ

ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಯೋಗಕ್ಷೇಮಕ್ಕೆ ದೀರ್ಘಕಾಲ ಕೊಡುಗೆ ನೀಡಿವೆ. ಗೃಹಿಣಿಯರು ಮನೆಯ ಕಾರ್ಯಾಚರಣೆಗಳ ನಿರ್ವಾಹಕರಾಗಿ ಸೇವೆ ಸಲ್ಲಿಸುತ್ತಾರೆ, ಹಾಗೆಯೆ ಮನೆಯ ನಿಯಂತ್ರಣ ಮತ್ತು ಆರೈಕೆಯನ್ನು ತೆಗೆದುಕೊಳ್ಳುತ್ತಾರೆ. ಸಮಾಜದಲ್ಲಿ ಅವರ ಪ್ರಮುಖ ಪಾತ್ರದ ಹೊರತಾಗಿಯೂ ಅವರನ್ನು ಯಾವಾಗಲೂ ಕಡಿಮೆ ಅಂದಾಜು ಮಾಡಲಾಗುತ್ತದೆ.

ಸಂತಾನೋತ್ಪತ್ತಿ ಜೀವಶಾಸ್ತ್ರ, ಕಡಿಮೆ ಸಾಮಾಜಿಕ ಸ್ಥಾನಮಾನ, ಬಡತನ ಮತ್ತು ಶಿಕ್ಷಣದ ಕೊರತೆ ಸೇರಿದಂತೆ ಹಲವಾರು ಕಾರಣಗಳಿಗಾಗಿ ಗೃಹಿಣಿಯರು ಪೌಷ್ಟಿಕಾಂಶದ ಕೊರತೆಯಿಂದ ಬಳಲುತ್ತಿದ್ದಾರೆ. ಜೊತೆಗೆ ಸಾಮಾಜಿಕ-ಸಾಂಸ್ಕೃತಿ-



ಕ ಸಂಪ್ರದಾಯಗಳು ಮತ್ತು ಮನೆಯ ಕೆಲಸದ ಮಾದರಿಗಳಲ್ಲಿನ ಅಸಮಾನತೆಗಳು ಗೃಹಿಣಿಯರಲ್ಲಿ ಅಪೌಷ್ಟಿಕತೆಯ ಸಾಧ್ಯತೆಯನ್ನು ಹೆಚ್ಚಿಸುತ್ತದೆ .

ಕಬ್ಬಿಣ, ವಿಟಮಿನ್ ಬಿ 12 ಮತ್ತು ಡಿ, ಕ್ಯಾಲ್ಸಿಯಂ, ಮೆಗ್ನೀಸಿಯಮ್, ಅಯೋಡಿನ್ ಮತ್ತು ಫೋಲೇಟ್ ಮಹಿಳೆಯರಲ್ಲಿ ಪೋಷಕಾಂಶಗಳ ಕೊರತೆಯನ್ನು ಉಂಟುಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಕಳಪೆ ಆಹಾರ ಅತಿಯಾದ ವ್ಯಾಯಾಮ ಕೆಲವು ಔಷಧಿಗಳು ಹಾಗೂ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳು ಪೌಷ್ಟಿಕಾಂಶದ ಕೊರತೆಗೆ ಕಾರಣವಾಗಬಹುದು.

ಹೇಳಲಾದ ಪೋಷಕಾಂಶಗಳ ಸೇವನೆಯ ಕೊರತೆಯಿಂದಾಗಿ ದೀರ್ಘಕಾಲದ ಒತ್ತಡ, ಮನೆ, ಕೆಲಸ, ಕುಟುಂಬ ಮತ್ತು ಮಕ್ಕಳ ನಡುವಿನ ಬಹುಕಾರ್ಯಕವು ಕಾಲಾನಂತರದಲ್ಲಿ ದೈನಂದಿನ ಒತ್ತಡಕ್ಕೆ ಕಾರಣವಾಗಬಹುದು. ದೀರ್ಘಕಾಲದ ಒತ್ತಡವು ಗ್ಲೂಕೋಸ್ ಚಯಾಪಚಯ, ಇನ್ಸುಲಿನ್ ಸಂವೇದನೆ ಮತ್ತು ಇತರ ಹಸಿವು-ಸಂಬಂಧಿತ ಪ್ರಕ್ರಿಯೆಗಳನ್ನು ಬದಲಾಯಿಸುತ್ತದೆ. ಇದು ಪೌಷ್ಟಿಕಾಂಶ-ದಟ್ಟವಾಗಿರದ ಆಹಾರಗಳ ಮನಸ್ಥಿತಿ ಮತ್ತು ಕಡುಬಯಕೆಗಳಿಗೆ ಕಾರಣವಾಗುತ್ತದೆ.

ಗೃಹಿಣಿಯು ಜೀವಸತ್ವಗಳು, ಖನಿಜಗಳು ಅಥವಾ ಕೊಬ್ಬಿನಾಮ್ಲಗಳಂತಹ ಸಾಕಷ್ಟು ಪೋಷಕಾಂಶಗಳನ್ನು ಸೇವಿಸದಿದ್ದಾಗ ಅಥವಾ ಹೀರಿಕೊಳ್ಳಲು ಸಾಧ್ಯವಾಗದಿದ್ದಾಗ ಪೋಷಕಾಂಶಗಳ ಕೊರತೆ ಉಂಟಾಗುತ್ತದೆ. ಕಬ್ಬಿಣ, ವಿಟಮಿನ್ ಬಿ 12, ವಿಟಮಿನ್ ಡಿ, ಕ್ಯಾಲ್ಸಿಯಂ, ಮೆಗ್ನೀಸಿಯಮ್, ಅಯೋಡಿನ್ ಮತ್ತು ಫೋಲೇಟ್‌ಗಳಲ್ಲಿ ಪೋಷಕಾಂಶಗಳ ಕೊರತೆಗೆ ಮಹಿಳೆಯರು ಹೆಚ್ಚು ಒಳಗಾಗುತ್ತಾರೆ.

ಪ್ರೋಟೀನ್‌ಗಳನ್ನು ಅವಲಂಬಿಸುವುದಕ್ಕಿಂತ ಹೆಚ್ಚಾಗಿ ಮಹಿಳೆಯರು ತಮ್ಮ ದೈನಂದಿನ ಶಿಫಾರಸು ಮಾಡಲಾದ ಪೋಷಕಾಂಶಗಳನ್ನು ಆಹಾರದ ಮೂಲಗಳ ಮೂಲಕ ಪಡೆಯಲು ಪ್ರಯತ್ನಿಸಬೇಕು. ಪೌಷ್ಟಿಕಾಂಶ-ದಟ್ಟವಾದ ಆಹಾರವು ತಾಜಾ ಹಣ್ಣುಗಳು ಮತ್ತು ತರಕಾರಿಗಳು, ಧಾನ್ಯಗಳು, ಬೀನ್ಸ್ ಮತ್ತು ಕಾಳುಗಳು, ಡೈರಿ ಮತ್ತು ಮೊಟ್ಟೆಗಳು ಮತ್ತು ಕೆಂಪು ಮಾಂಸ, ಕೋಳಿ ಮತ್ತು ಸಮುದ್ರಾಹಾರದಂತಹ ಪ್ರಾಣಿಗಳಲ್ಲಿ ಪ್ರೋಟೀನ್ಗಳನ್ನು ಒಳಗೊಂಡಿರುತ್ತದೆ.

(ಮಿತವಾಗಿರುವುದು ಪ್ರಮುಖವಾಗಿದೆ).

ಪೋಷಕಾಂಶದ ಕೊರತೆ ಎಂದರೆ ದೇಹವು ಜೀವಸತ್ವಗಳು, ಖನಿಜಗಳು ಮತ್ತು ಆರೋಗ್ಯಕರ ಅಂಗಾಂಶಗಳು ಮತ್ತು ಅಂಗಗಳ ಕಾರ್ಯವನ್ನು ನಿರ್ವಹಿಸಲು ಅಗತ್ಯವಿರುವ ಇತರ ಪೋಷಕಾಂಶಗಳಿಂದ ವಂಚಿತವಾದಾಗ ಬೆಳವಣಿಗೆಯಾಗುವ ಸ್ಥಿತಿಯಾಗಿದೆ. ಅಪೌಷ್ಟಿಕತೆ ಹೊಂದಿರುವ ಜನರಲ್ಲಿ ಅಪೌಷ್ಟಿಕತೆ ಕಂಡುಬರುತ್ತದೆ.

ಗೃಹಿಣಿಯರು ಸಾಮಾನ್ಯವಾಗಿ ತಮ್ಮ ಕುಟುಂಬಗಳಲ್ಲಿ ಪಾಲನೆಯ ಸ್ಥಾನವನ್ನು ವಹಿಸುತ್ತಾರೆ. ಅವರು ಹೊಂದಿರುವ ಋಣಾತ್ಮಕ ಸ್ವಯಂ-ಚಿತ್ರಣವು ಅವರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು ಮತ್ತು ಇದು ತಿನ್ನುವುದು ಮತ್ತು ನಿದ್ರೆಯಲ್ಲಿ ಸಮಸ್ಯೆಗಳನ್ನು ಉಂಟುಮಾಡಬಹುದು.

ಗೃಹಿಣಿಯರು (ವಿಶೇಷವಾಗಿ ಅವರು ಚಿಕ್ಕ ಮಕ್ಕಳನ್ನು ಹೊಂದಿದ್ದರೆ.) ತಿನ್ನುವ ಅಸ್ವಸ್ಥತೆಗಳನ್ನು ಅಭಿವೃದ್ಧಿಪಡಿಸುವ ಹೆಚ್ಚಿನ ಅವಕಾಶವನ್ನು ಹೊಂದಿರುತ್ತಾರೆ,

ಆಹಾರವು ಆರೋಗ್ಯ ನಿರ್ವಹಣೆಯ ಮೇಲೆ ಪರಿಣಾಮ ಬೀರುವ ಮೂಲಭೂತ ಅಂಶವಾಗಿದೆ. ವ್ಯಕ್ತಿಯ ಆಹಾರದ ಜೀವನವು ವಯಸ್ಸು, ಶಿಕ್ಷಣ, ಉದ್ಯೋಗ, ಆರ್ಥಿಕ ಮಟ್ಟ, ಕುಟುಂಬದ ಸ್ಥಿತಿ ಮತ್ತು ನಿವಾಸದಂತಹ ಹಲವಾರು ಪರಿಸರ ಅಂಶಗಳಿಂದ ಪ್ರಭಾವಿತವಾಗಿರುತ್ತದೆ.

ಕೌಟುಂಬಿಕ ಆಹಾರದ ಜೀವನ ನಿರ್ವಹಣೆ ಮತ್ತು ಮಗುವಿನ ಆರೈಕೆಯನ್ನು ಒಳಗೊಂಡಿರುವ ವಿಶಿಷ್ಟವಾದ ಗೃಹನಿರ್ಮಾಣ ಕರ್ತವ್ಯಗಳ ಕಾರಣದಿಂದಾಗಿ ಗೃಹಿಣಿಯರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಕಡಿಮೆ ಸಮಯವನ್ನು ಹೊಂದಿರುತ್ತಾರೆ.

ಮಹಿಳೆಯರ ಸಾಮಾಜಿಕ ಸಹಭಾಗಿತ್ವವು ಇತ್ತೀಚೆಗೆ ಕೆಲಸ ಮಾಡುವ ಗೃಹಿಣಿಯರ ಸಂಖ್ಯೆಯನ್ನು ಹೆಚ್ಚಿಸಿದೆ, ಇದರ ಪರಿಣಾಮವಾಗಿ ಆಹಾರ ಪದ್ಧತಿಯಲ್ಲಿ ಬದಲಾವಣೆಯಾಗಿದೆ. ಇತ್ತೀಚೆಗೆ ಅನುಕೂಲಕ್ಕಾಗಿ ತ್ವರಿತ ಮತ್ತು ಸಂಸ್ಕರಿಸಿದ ಆಹಾರಗಳ ಬಳಕೆ



ಹೆಚ್ಚಾಗಿದೆ. ತ್ವರಿತ ಮತ್ತು ಸಂಸ್ಕ-ರಿಸಿದ ಆಹಾರಗಳು ಹೆಚ್ಚಿನ ಕ್ಯಾಲೋರಿ ಆಹಾರಗಳಾಗಿವೆ ಮತ್ತು ನಿಯಮಿತವಾಗಿ ಸೇವಿಸಿದಾಗ ಸುರಕ್ಷತಾ ಸಮಸ್ಯೆಗಳಿಗೆ ಕಾರಣವಾಗುತ್ತವೆ.

ಪರಿಣಾಮವಾಗಿ ಸ್ಥೂಲ ಕಾಯ ಮತ್ತು ಸೆಡಿಮೆಂಟರಿ ಜೀವನಶೈಲಿಯೊಂದಿಗೆ ಸಂಬಂಧಿಸಿದ ರೋಗಗಳು ಅಸಮತೋಲಿತ ಆಹಾರದ ಕಾರಣದಿಂದಾಗಿ ಹೆಚ್ಚಾಗಿದೆ. ಗೃಹಿಣಿಯರ ಆಹಾರ ಸೇವನೆಯಲ್ಲಿನ ಬದಲಾವಣೆಗಳು ದೈಹಿಕ ಚಟುವಟಿಕೆಯಲ್ಲಿನ ಇಳಿಕೆಯೊಂದಿಗೆ ಸ್ಥೂಲಕಾಯತೆಯ ಸಾಮಾಜಿಕ ಸಮಸ್ಯೆಗೆ ಕಾರಣವಾಗಿದೆ.

ಸರಿಯಾದ ಪೋಷಣೆಯು ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ, ಶಕ್ತಿಯ ಮಟ್ಟವನ್ನು ಹೆಚ್ಚಿಸುತ್ತದೆ ಮತ್ತು ಹೃದ್ರೋಗ, ಪಾರ್ಶ್ವವಾಯು ಮತ್ತು ಮಧುಮೇಹ ಸೇರಿದಂತೆ ಕೆಲವು ದೀರ್ಘಕಾಲದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಇದರ ಅರಿವು ಗೃಹಿಣಿಯಾರಲ್ಲಿ ಮೂಡಿದಾಗ ಪೋಷಕಾಂಶದ ಕೊರತೆಯ ಮಟ್ಟ ಕಡಿಮೆಯಾಗುತ್ತದೆ.

ಮುಖ್ಯವಾಗಿ ಮನೆಯೊಡತಿ ಆಗಿರುವಳಾದರೂ ಅಡುಗೆ ಮನೆಯೊಡತಿ ಎಂಬುದು ನಿಶ್ಚಿತ ಸ್ವರೂಪ. ಅಡುಗೆ ಮನೆಯಲ್ಲಿಯೆ ಆರೋಗ್ಯದ ಗುಟ್ಟು ಕಟ್ಟಿಕೊಂಡಿರುವ ಮಹಿಳೆಗೆ ಪೋಷಕಾಂಶದ ಕೊರತೆ ಉಂಟಾಗದಂತೆ ನೋಡಿಕೊಳ್ಳುವುದು ದೊಡ್ಡ ವಿಷಯವೇನಲ್ಲ.

ಗೋಡಂಬಿ,ದ್ರಾಕ್ಷಿ ,ಕಲ್ಲುಸಕ್ಕರೆ ಬೆಲ್ಲ,ಹಾಲು , ಧಾನ್ಯಗಳು ಬೇಳೆಕಾಳುಗಳು ಹಣ್ಣು

ತರಕಾರಿಗಳು ಇವೆಲ್ಲವುಗಳಲ್ಲಿ ಅವಳು ತನ್ನ ಕೈಚಳಕದ ಛಾಪು ಮೂಡಿಸಿ ಕಂಡುಕೊಂಡ ರುಚಿ ಅಭಿರುಚಿ ಜೊತೆಗೆ ಖಾಯಂ ಬಾಣಸಿಗಳಾಗಿ ತಾನು ತನ್ನ ಕುಟುಂಬದ ಆರೋಗ್ಯಕ್ಕೆ ಏನೇನು ಬೇಕೆಂದು ಲೆಕ್ಕಾಚಾರ ಹಾಕಿ ಅಡುಗೆ ತಯಾರಿಸುವಲ್ಲಿ ಅವಳು ನಿಪುಣಳಾಗಿದ್ದಾಳೆ, ಇದರೊಟ್ಟಿಗೆ ಸ್ವಾರ್ಥಿಯಾಗಿ ಆರೋಗ್ಯದ ರಕ್ಷಣೆಯಲ್ಲಿ ದೊಡ್ಡ ಹೆಜ್ಜೆ ಇಟ್ಟು

ತನ್ನ ಆರೋಗ್ಯ ರಕ್ಷಣೆ ಮಾಡಿಕೊಳ್ಳಲು ಹಿಂಜರಿಯದೆ ತನ್ನನ್ನು ತಾನು ಆಹಾರಾಂಶದ ನಿರ್ವಹಣೆಯಿಂದ ಬೆಸೆದುಕೊಳ್ಳುವುದು ಅತ್ಯುತ್ತಮ ಎಂದೆನಿಸುತ್ತದೆ...

ಕೊನೆಗಿಷ್ಟು........

ಹುದುಗಿಸಿಟ್ಟುಕೊಂಡಿಹಳು
ತನ್ನೊಳಗೆ
ಪ್ರೀತಿಯೆಂಬ ಪೋಷಕಾಂಶ,
ಹದವಾಗಿ ಬಡಿಸುವಳು
ತೋಳ್ಬೆಸೆದ ಜೀವಗಳಿಗೆ
ನಿಸ್ವಾರ್ಥತೆಯಲಿ ಅದರ ಸಾರಾಂಶ....!!!